# ಪ್ರಾಯದ ಕುದುರೆ

ರಂಜನ್

BlueRose ONE.com DIY
Stories Matter
NewDelhi • London

**BLUEROSE PUBLISHERS**
India | U.K.

Copyright © Ranjan 2026

All rights reserved by author. No part of this publication may be reproduced, stored in a retrieval system or transmitted in any form or by any means, electronic, mechanical, photocopying, recording or otherwise, without the prior permission of the author. Although every precaution has been taken to verify the accuracy of the information contained herein, the publisher assumes no responsibility for any errors or omissions. No liability is assumed for damages that may result from the use of information contained within.

BlueRose Publishers takes no responsibility for any damages, losses, or liabilities that may arise from the use or misuse of the information, products, or services provided in this publication.

For permissions requests or inquiries regarding this publication,
please contact:

BLUEROSE PUBLISHERS
www.BlueRoseONE.com
info@bluerosepublishers.com
+91 8882 898 898
+4407342408967

ISBN: 978-93-7542-144-3

First Edition: January 2026

# ಪರಿವಿಡಿ

| ಕವಿತೆಗಳು | | ಪುಟ.. |
| --- | --- | --- |
| ೧. | ಪ್ರಾಯದ ಕುದುರೆ | --- ೩ |
| ೨. | ಸೃಷ್ಟಿಯ ಮೂಲ | --- ೫ |
| ೩. | ಕಲಿತೆ | --- ೭ |
| ೪. | ನನ್ನ ಗೆಳೆಯ-೧ | --- ೯ |
| ೫. | ನನ್ನ ಗೆಳೆಯ-೨ | --- ೧೨ |
| ೬. | ನನ್ನ ಗೆಳೆಯ-೩ | --- ೧೫ |
| ೭. | ತಡರಾತ್ರಿಯಲ್ಲಿ | --- ೧೮ |
| ೮. | ಕುದಿವ ರಕ್ತ | --- ೨೧ |
| ೯. | ಇವರ ಜಗಳ | --- ೨೪ |
| ೧೦. | ಅಮರ | --- ೨೭ |
| ೧೧. | ಐದು ದಿನದ ಪ್ರೀತಿ | --- ೩೦ |
| ೧೨. | ದುಂಬಿ | --- ೩೨ |
| ೧೩. | ನನಗಲ್ಲ | --- ೩೩ |
| ೧೪. | ಪ್ರಣಯದಲ್ಲಿ ನಾನು | --- ೩೪ |
| ೧೫. | ಗೆಳೆಯರು | --- ೩೭ |
| ೧೬. | ನನ್ನವಳೇ ಸಾಕು | --- ೩೯ |
| ೧೭. | ಮಾನವರು | --- ೪೧ |
| ೧೮. | ಹೌದು ಕಪ್ಪು | --- ೪೪ |
| ೧೯. | ಪ್ರೀತಿಸಿರಲಿಲ್ಲ | --- ೪೬ |
| ೨೦. | ಕಾಲ್ಗೆಜ್ಜೆಯ ನಾದ | --- ೪೮ |
| ೨೧. | ಸಂದಾಗಿರು | --- ೫೦ |
| ೨೨. | ಎಣಿಸಲಾಗದು | --- ೫೪ |
| ೨೩. | ಮರೆಯದೆ ಮನಸಿನಲೆ ಪ್ರೀತಿಯನು ಮಾಡೋಣ | --- ೫೬ |
| ೨೪. | ಅವನು - ನೀನು | --- ೬೦ |
| ೨೫. | ಹೂ ಮಳೆ | --- ೬೩ |
| ೨೬. | ಕ್ರೂರಿ | --- ೬೪ |
| ೨೭. | ಚಂಗ್ಲುಮುಂಡೆ | --- ೬೭ |

| | | |
|---|---|---|
| ೨೮. | ರೈಲಲ್ಲಿ | --- ೩೯ |
| ೨೯. | ಹದಿ ಹರೆಯದ ಕೂಳೆಗಳು | --- ೭೧ |
| ೩೦. | ಕಸವಾದೆ | --- ೭೩ |
| ೩೧. | ಪ್ರೀತಿ ಸೇತ್ವೆ | --- ೭೫ |
| ೩೨. | ಏನಿದೆ? | --- ೭೭ |
| ೩೩. | ನಿಜವಲ್ಲ | --- ೭೯ |
| ೩೪. | ನನ್ನ ಮಹಾತಾಯಿ | --- ೮೦ |
| ೩೫. | ನವಿರಾದ ಪ್ರೇಮ | --- ೮೪ |
| ೩೬. | ಸ್ನೇಹರತ್ನ | --- ೮೫ |
| ೩೭. | ಸುಳ್ಳು | --- ೮೭ |
| ೩೮. | ನಾನಿನ್ನ ಪ್ರೀತಿಸುವೆ ಏಕೆಂದು ಗೊತ್ತಿಲ್ಲ | --- ೮೯ |
| ೩೯. | ಪ್ರೇಮರಾಗ | --- ೯೧ |
| ೪೦. | ಅಷ್ಟ–ಕ್ಕಷ್ಟೆ | --- ೯೩ |
| ೪೧. | ಮಿಂಡ್ರಿಗಳು | --- ೯೫ |
| ೪೨. | ಮಾಟಗಾತಿ | --- ೯೭ |
| ೪೩. | ನಿನ್ನ ಕಣ್ಣು | --- ೯೯ |
| ೪೪. | ಅಂತರಾಳದಾಳದಾಳದಲಿ | --- ೧೦೧ |
| ೪೫. | ನಿಜ | --- ೧೦೩ |
| ೪೬. | ಪೊತ್ತಲ್ದ ಪೊತ್ತು | --- ೧೦೫ |
| ೪೭. | ಮಹಾನಟಿ | --- ೧೦೮ |
| ೪೮. | ಹೊತ್ತಾಗಿದೆ | --- ೧೧೦ |
| ೪೯. | ರಾಜಕುಮಾರಿ | --- ೧೧೨ |
| ೫೦. | ಪಯಣ | --- ೧೧೪ |

# ೧. ಪ್ರಾಯದ ಕುದುರೆ

ಪ್ರಾಯದ ಕುದುರೆ ಪಾದವು ಗಟ್ಟಿ
ಪ್ರಾಯದ ಕುದುರೆ ಕಣ್ಣಿಗೆ ಪಟ್ಟಿ
ಕಸವ ಮೆಟ್ಟಿದರು ರಾಜ ಬೀದಿಯದು
ನಾ ನೆಡೆದೆಡೆ ಸರಿ ರಾಜ ಮಾರ್ಗವದು

ಅಪ್ಪನೂ ತಪ್ಪು ಅಮ್ಮನೂ ತಪ್ಪು
ಹಿತವ ಬಯಸುವ ಮಿತ್ರರೂ ತಪ್ಪು
ಅಣ್ಣನೂ ತಪ್ಪು ತಮ್ಮನೂ ತಪ್ಪು
ಬುದ್ಧಿ ಹೇಳುವ ಗುರುಗಳೂ ತಪ್ಪು

ಮಂಗನ ಮನಸಿನ ಪ್ರಾಯದ ಪಕ್ಷಿ ನಾ
ಚಂದ್ರನ ಮೇಲೂ ಹಾರುವ ಹುರುಪು
ಗರಗರ ತಿರುಗುವ ಬಣ್ಣದ ಬುಗುರಿ ನಾ
ಕತ್ತಲೆಯಲ್ಲೂ ಕಾಣುವೆ ಬಿಳುಪು

ನನಗಿಲ್ಲಾ ಹೊರ ಲೋಕದ ಚಿಂತೆ
ಬರೀ ಕೇವಲ ನನ್ನ ರೂಪದ ಚಿಂತೆ
ನನ್ನ ಕಣ್ಣಿಗಿದು ಕುರಿಗಳ ಸಂತೆ
ಮಾರುವ ಮಾಲೀಕ ಮೋಹದ ಕಂತೆ

ಅತಿ ವೇಗದ ಬಾಣದ ಹಾಗೆ ನಾ
ಅಪಘಾತವು ಆದರೆ ಆಗಲಿ
ಈ ಭೂಮಿಯೆ ಕುಸಿದರು ಕುಸಿಯಲಿ
ಯಾರೇಗಾದರು ಹಾಳಾಗಲಿ, ಸಾಯಲಿ

ನನ್ನ ಜೀವನ ನನ್ನದೇ ತತ್ವ
ನನ್ನ ಮಾತಿಗೆ ಹೌದು ಇಲ್ಲ ಗುರುತ್ವ
ಬತ್ತೋದ ಮುದಿ ಕಪ್ಪೆಗೇನ್ ಗೊತ್ತು
ಈ ಪ್ರಾಯದ ಕುದುರೆಗೆ ಪ್ರೇಮದ ಮತ್ತು

ನಾ ಎಡವಿದರೆ ಕಲ್ಲಿನ ತಪ್ಪು
ನಾ ಮುಳುಗಿದರೆ ನೀರಿನ ತಪ್ಪು
ರಂಜನ್ ಮೂರ್ಖ, ದಡ್ಡ ಶಿಕಾಮಣಿಯೇ ಸರಿ
ದುಡುಕಿ ದುಃಖದಲಿ ಬಳಲುವುದೇ ಸರಿ

ಒಂದೊಂದೇ ಪ್ರಾಯದ ಹಂತವ ದಾಟುತ
ಬದುಕಿನ ಬಂಡೆಗೆ ಉಳಿಯನು ಮೀಟುತ
ಪ್ರಾಯದ ಕುದುರೆ ಪಳಗದೆ ಪುಟಿಯುತ
ಭಾವನೆಗಳಿಗೆ ಬಣ್ಣವ ಬಳಿಯುತ

ಬಣ್ಣಬಣ್ಣದ ಕನಸನು ಕಾಣುತ
ರಕ್ತವ ಕುದಿಸಲು ಜ್ವಾಲೆಯ ಕೆದಕುತ
ಹಳಿಯನು ತಪ್ಪಿ ದುಷ್ಚಟ ಕಿಳಿದರು
ಮೇಲೇರುವೆ ಆಸೆಯ ತುಳಿಯುತ

ಪ್ರಾಯದ ಕುದುರೆ ಪಾದವು ಗಟ್ಟಿ
ಪ್ರಾಯದ ಕುದುರೆ ಕಣ್ಣಿಗೆ ಪಟ್ಟಿ
ಕಸವ ಮೆಟ್ಟಿದರು ರಾಜ ಬೀದಿಯದು
ನಾ ನೆಡೆದೆಡೆ ಸರಿ ರಾಜ ಮಾರ್ಗವದು..

# ೨. ಸೃಷ್ಟಿಯ ಮೂಲ

ಬಿರುಗಾಳಿಯು ಸುನಾಮಿಗೆ ಮೂಲ
ತಂಗಾಳಿ ಜಡಿಮಳೆಗೆ ಮೂಲ
ಈ ಜನರು ಮುಚ್ಚುವ ಕೆರೆಗಳು
ಸುಡುಸುಡುವ ಬರಗಾಲಕೆ ಮೂಲ

ನಿಮ್ಮ ನಗು ಸಂತೋಷಕೆ ಮೂಲ
ನಿಮ್ಮ ಬೆಂಬಲ ಗೆಲುವಿಗೆ ಮೂಲ
"ಅಮ್ಮ" ಎನ್ನುವ ಸುಂದರ ಪದವೇ
ಬ್ರಹ್ಮಾಂಡದ ಸೃಷ್ಟಿಯ ಮೂಲ

ಆ ಸೂರ್ಯ ಬೆಳಕಿಗೆ ಮೂಲ
ಈ ಚಂದ್ರ ಇರುಳಿಗೆ ಮೂಲ
ಈ ಗಿಡ–ಮರ–ಬಳ್ಳಿಗಳೆಲ್ಲವು
ಉಸಿರಾಡುವ ಗಾಳಿಗೆ ಮೂಲ

ಆ ದುಡ್ಡು ಹುಚ್ಚಿಗೆ ಮೂಲ
ಈ ಮನಸು ನೋವಿಗೆ ಮೂಲ
ನೀವಿಲ್ಲದೆ ಹೋದರೆ ತಾಯಿ
ಈ ಭೂಮಿ ನರಕಕೆ ಮೂಲ

ತಲೆಯು ಯೋಚನೆಗೆ ಮೂಲ
ಯೋಚನೆ ಅಬಿವೃದ್ಧಿಗೆ ಮೂಲ
ಯೋಜನೆಗಳಿಲ್ಲದೆ ಹೋದರೆ
ಯುವ ಜನತೆ ನಿರುದ್ಯೋಗಕೆ ಮೂಲ

ಸಾಗರ ಅಲೆಗಳಿಗೆ ಮೂಲ
ಸಂಶಯ ಮನಃಸ್ತಾಪಕೆ ಮೂಲ
ಸಂಶಯವೇ ಇಲ್ಲ ನನ್ನಮ್ಮ
ನಿಮ್ಮ ಮಾತು ಮಹಾಜ್ಞಾನಕೆ ಮೂಲ

ನಿಮ್ಮ ಕೈತುತ್ತು ಮೃಷ್ಟಾನ್ನಕೆ ಮೂಲ
ನಿಮ್ಮ ಕಿಡಿ ಕೋಪ ಕಾಡ್ಗಿಚ್ಚಿಗೆ ಮೂಲ
ಹಡೆದವಳ ನೋಯಿಸಿದರೆ ರಂಜನ್,
ಬಲು ಕೊಳಕು ಜೀವವಿದು, ಜೀವಂತ ಶವಕ್ಕೆ ಮೂಲ

ಆಕೆ ಶ್ರಮ ನಿನ್ನ ನಾಳೆಗೆ ಮೂಲ
ಮಾತೆಯೊಡಲು ನಿನ್ನ ಜನ್ಮಕೆ ಮೂಲ
ಋಣವನ್ನಂತೂ ತೀರಿಸಲಾಗದು,
ನಿನ್ನ ಏಳಿಗೆ ಅವಳ ತೃಪ್ತಿಗೆ ಮೂಲ..

# ೩. ಕಲಿತೆ

ನೀರಲ್ಲೂ ನಡೆವುದ ಕಲಿತೆ
ಹಿಮವನ್ನೂ ಸುಡುವುದ ಕಲಿತೆ
ನಮ್ಮಪ್ಪನ ನೆರಳಲಿ ನಾನು
ಸಂಸ್ಕಾರ, ವಿನಯವ ಕಲಿತೆ

ಅವರು ಮನೆಯನು ಬೆಳಗುವ ಹಣತೆ
ಪರಿಶ್ರಮಕೆ ಕನ್ನಡಿಯಂತೆ
ಅವರಾಡುವ ಕನ್ನಡ ಕೇಳುತ
ಸಾಹಿತ್ಯವ ಬರೆವುದ ಕಲಿತೆ

ಇಡುವ ಪ್ರತಿ ಹೆಜ್ಜೆಗು ಘನತೆ
ಎಲ್ಲೂ ತಲೆ ಭಾಗದ ಸ್ಥಿರತೆ
ಅವರ ತಾಳ್ಮೆಯ ತಾರಕ ಕಂಡು
ಮುಳ್ಳಿನ ಹಾದಿಯ ಮೆಟ್ಟಲು ಕಲಿತೆ

ಮಧುರ ಕಂಠದ ಶಾಂತ ಸ್ವರೂಪಿ
ನಾಲಿಗೆ ತುದಿಯಲಿ ತೊದಲದ ನಿಪುಣತೆ
ಗ್ರಂಥ – ಮಂತ್ರಗಳ ಓದಿರದಿದ್ದರು
ನೀತಿ – ತತ್ವಗಳು ತುಂಬಿದ ದಕ್ಷತೆ

ಧರೆಯು ದಹದಹಿಸಿ ಉರಿಯುವಾಗಲೂ
ಹೂನಗೆ ಕಂಡು ಬೆವರಲು ಮರೆತೆ
ಬರಿಗಣ್ಣಲ್ಲೇ ಮುಖವನು ನೋಡಿ
ಮನುಜರ ಮನಸನು ಓದಲು ಕಲಿತೆ

ಬಿದ್ಧಂತ ಗುಂಡಿಯ ಮುಚ್ಚಲು ಕಲಿತೆ
ಸೋಲಿನ ಬಂಡೆಯ ಕಚ್ಚಲು ಕಲಿತೆ
ನಮ್ಮಪ್ಪ ತುಳಿಯುವಾ ಯಂತ್ರವ ನೋಡುತ
ಕಾಲಚಕ್ರದಲಿ ತಿರುಗಿ, ಮಿಂಚಲು ಕಲಿತೆ

ಪ್ರೇಮವ ಅನುದಿನ ಹಂಚಲು ಕಲಿತೆ
ತೃಷೆಯಲಿ ಸುಧೆಯನು ಹೊಂಚಲು ಕಲಿತೆ
ಅವರೆಂದರೆ ಗೌರವ ಬಾಯನು ಕಟ್ಟಿದೆ
ಅದಕೇ ಕಣ್ಣಲೆ ನುಡಿಯನು ಕಲಿತೆ

ಪ್ರೀತಿ ಎಷ್ಟಿದೆ ಅಳೆಯುತ ಕುಳಿತರೆ
ಮುಗಿಯದು ರಂಜನ್ ಬರೆಯಲು ಕವಿತೆ
ಮೌನ ತೀರದೆರಡು ದಡದಲಿ ನಿಂತು
ನಮ್ಮಪ್ಪನ ಕೈ ಹಿಡಿದು ನಡೆಯಲು ಕಲಿತೆ..

# ೪. ನನ್ನ ಗೆಳೆಯ-೧

ಪ್ರೀತಿ–ಪ್ರೇಮದ ಮತ್ತಿಗೆ ಮರುಳಾಗಿ
ಯಾವುದೋ ಹುಡುಗಿಯ ಸೆಳೆತಕ್ಕೆ ಸಲುವಾಗಿ
ಆ ಹುಡುಗಿಯ ನೋಟದ ಮಾಟಕ್ಕೆ ಮೊಬ್ಬಾಗಿ
ಮೋಡಿ ಮಾಡುವ ಪ್ರೀತಿಯ ಮೋಹಕ್ಕೆ
ಬಿದ್ಧನು–ಬಿದ್ಧನು ಸಿಕ್ಕಿ ಬಿದ್ಧನು ನನ್ನ ಗೆಳೆಯ

ಆ ಹುಡುಗಿಯ ಮಾತಿನ ಮಾಯೆಗೆ ಸಿಲುಕಿ
ಸ್ನೇಹಿತರೆಲ್ಲರನ್ನೂ ದೂರಕ್ಕೆ ನೂಕಿ
ಓದು–ಬರಹವನ್ನಂತೂ ಮನಸ್ಸಿಂದ ತೊಡೆದಾಕಿ
ಪ್ರೀತಿಯನು ಎದೆತುಂಬ ತುಂಬಿಕೊಂಡು, ಎಡವಿ
ಬಿದ್ಧನು–ಬಿದ್ಧನು ಸಿಕ್ಕಿ ಬಿದ್ಧನು ನನ್ನ ಗೆಳೆಯ

ಗಳಿಗೆಗೊಮ್ಮೆ ಕರೆಮಾಡಿ
ವಿಷಯವಿಲ್ಲದೇ ಮಾತಾಡಿ
ಆ ಹುಡುಗಿಯೊಂದಿಗೆ ಊರೆಲ್ಲಾ ಹುಚ್ಚನಂತೆ ಅಲೆದಾಡಿ
ಕತ್ತಲರಿದು ಬೆಳಕಾದರು ಸಂದೇಶದಲಿ ಮುದ್ದಾಡಿ, ಕೊನೆಗೆ
ಬಿದ್ಧನು–ಬಿದ್ಧನು ಸಿಕ್ಕಿ ಬಿದ್ಧನು ನನ್ನ ಗೆಳೆಯ

ತಂದೆ–ತಾಯಿಯನು ಮರೆತು
ಪ್ರಜ್ಞೆಯಿಲ್ಲದೆ ಒಬ್ಬನೇ ಕುಳಿತು
ಗಂಟೆ–ಗಂಟೆಗಳ ವರೆಗೆ ಮಾತಲ್ಲಿ ಬೆರೆತು
ಏನಾಗಿದೆ ನಿನಗೆ ಎಂದರೆ, ಕೇಳಬೇಡ ರಂಜನ್
ಇದು ಪ್ರೀತಿಯ ಮಾಯೆಯೆನ್ನುತ್ತ,
ಬಿದ್ಧನು–ಬಿದ್ಧನು ಸಿಕ್ಕಿ ಬಿದ್ಧನು ನನ್ನ ಗೆಳೆಯ

ಊರಿಗೆಲ್ಲಾ ತಿಳಿದರೂ ತಂದೆ–ತಾಯಿಗೆ ತಿಳಿಯದಂತೆ
ಸ್ನೇಹಿತರೆಲ್ಲಾ ಹೇಳಿದರೂ ಯಾರ್ಮಾತೂ ಕೇಳದಂತೆ
ತನಗವಳು ಅವಳಿಗೆ ತಾನು ಎನ್ನುತ್ತ
ಹಗಲೂ–ಇರುಳೂ ಅವಳನ್ನೇ ನೆನೆಯುತ್ತಾ,
ಬಿದ್ಧನು–ಬಿದ್ಧನು ಸಿಕ್ಕಿ ಬಿದ್ಧನು ನನ್ನ ಗೆಳೆಯ

ಒಂದಿನ ತರಗತಿಗೆ ಗೈರು ಹಾಜರಾಗಿ
ಆ ಹುಡುಗಿಯೊಂದಿಗೆ ಖುಷಿಯಿಂದ ಸಿನಿಮಾಗೆ ಹೋಗಿ
ಸಾಲದೆಂದು ರಸ್ತೆಯಲಿ ಅವಳೆಸರನ್ನು ಕೂಗಿ
ಹಾದಿಯಲಿ ಹೆಜ್ಜೆ ಹಾಕುತಿದ್ದ ನಮ್ಮ ಗುರುಗಳ ಕೈಗೆ,
ಬಿದ್ಧನು–ಬಿದ್ಧನು ಸಿಕ್ಕಿ ಬಿದ್ಧನು ನನ್ನ ಗೆಳೆಯ

ಗುರುಗಳು ನೋಡಿದರು, ಇದು ತಪ್ಪೆಂದು ಹೇಳಿದರು
ಜೊತೆಗೆರಡು ಏಟನ್ನು ಬೂಟಿಂದ ನೀಡಿದರು
ಆ ಹುಡುಗಿಗೆ ಮುಕ್ಕಳಿಸಿ ಬಾಯ್ತುಂಬಾ ಉಗಿದರು
ಆದರೂ ಅಂಜದೆ ತನ್ನ ಚಾಳಿಯನು ಮುಂದುವರೆಸುತ,
ಬಿದ್ಧನು–ಬಿದ್ಧನು ಸಿಕ್ಕಿ ಬಿದ್ಧನು ನನ್ನ ಗೆಳೆಯ

ಕಡೆಗೊಂದುದಿನ ರಾತ್ರಿ ಕಂಬಲಿಯೊಳಗೆ ಫೋನನ್ನು ನೋಡುತ್ತಾ
ಅವಳೊಂದಿಗೆ ವೀಡಿಯೋ ಕರೆಯಲ್ಲಿ ನಾಚಿ ನೀರಾಗುತ್ತ
ಅವನ ತಂದೆ–ತಾಯಿಗೆ ಅನುಮಾನ ಬರುವಂತೆ ನುಲಿಯುತ್ತಾ
ಕಂಬಲಿ ತೆಗೆದರೆ ಅವಳೊಂದಿಗೆ ಸರಸವಾಡುತ್ತ,
ಬಿದ್ಧನು–ಬಿದ್ಧನು ಸಿಕ್ಕಿ ಬಿದ್ಧನು ನನ್ನ ಗೆಳೆಯ

ತಂದೆ–ತಾಯಿ ಆತನ ಮುಖವನ್ನು ನೋಡಿ
ತಾಯೊಂದು ಪೊರಕೆಯನು ತಂದೆಯೊಂದು ಪಟ್ಟಿಯನು
ತೆಗೆದುಕೊಂಡರು  ಕೂಡಲೇ ಓಡಿ
ಅವನಿನ್ನೂ ಅವಳಿಗೆ ಶುಭರಾತ್ರಿ ಎಂದು ಸಂದೇಶವನು ನೀಡಿ
ನೋಡಿದನವನ ತಂದೆ–ತಾಯಿಯ ವೀರ ರೂಪವನು ಭಯದಿಂದ,
ಬಿದ್ಧನು–ಬಿದ್ಧನು ಸಿಕ್ಕಿ ಬಿದ್ಧನು ನನ್ನ ಗೆಳೆಯ

ಪೊರಕೆ–ಪಟ್ಟಿಗಳೇಟು ಮೈತುಂಬಾ ಬಿದ್ದಿದ್ದವು
ಕೆಂಪಾದ ಬಾಸುಂಡೆಗಳು ಕೆನ್ನೆತುಂಬಾ ಮೂಡಿದ್ದವು
ಆತನ ಫೋನಂತು ನಾಲ್ಕು ಭಾಗಗಳಾಗಿ ಮಲಗಿದ್ದವು
ತಂದೆ–ತಾಯಿಗಂತೂ ಕೈ–ಬಾಯಿಗಳು ನೋವ್ಬರುವಂತೆ,
ಬಿದ್ಧನು–ಬಿದ್ಧನು ಸಿಕ್ಕಿ ಬಿದ್ಧನು ನನ್ನ ಗೆಳೆಯ

ಮರುದಿನವೇ ಅವಳಿಗೆ ವಿದಾಯವನ್ನು ಹೇಳಿದನು
ಪ್ರೀತಿ–ಪ್ರೇಮ ಕ್ಷಣಿಕವೆಂದು ನನಗೆ ಉಪದೇಶ ನೀಡಿದನು
ಇನ್ಮುಂದೆ ಪ್ರೀತಿಯ ಸಹವಾಸಕ್ಕೆ ಹೋಗಲಾರೆನೆಂದು ಶಪಥವ ಮಾಡಿದನು
ಮಾರನೆಗೆ ಇನ್ನೊಂದು ಹುಡುಗಿಯ ನಂಬರ್ ಗೆ ಕಣ್ಣಾಕುತ್ತ,
ಬಿದ್ಧನು–ಬಿದ್ಧನು ಮರಳಿ ಪ್ರೀತಿಗೆ ಬಿದ್ಧನು ನನ್ನ ಗೆಳೆಯ..

# ೫. ನನ್ನ ಗೆಳೆಯ-೨

ಕೆಂಪಾದ ಕೆನ್ನೆಯು ತಣ್ಣಗಾಗಲು
ಬಿದ್ಧಂತ ಏಟುಗಳ ನೆನಪೋಗಲು
ಒಂದು ಹೊಸ ಹುಡುಗಿಯ ಮೇಲೆ ದೃಷ್ಟಿ ಬೀಳಲು
ಆ ಹುಡುಗಿಯ ನಂಬರ್‌ಗೆ ನಾಯಿಯಂತೆ ಅಲಿಯುತ್ತ
ಹೊಸ ಫೋನಿಗಾಗಿ ಪೋಷಕರ ಬಳಿ ಕೊರಗುತ್ತ
ಬಿದ್ಧನು-ಬಿದ್ಧನು ಮರಳಿ ಬಿದ್ಧನು ನನ್ನ ಗೆಳೆಯ

ಆ ಹೊಸ ಹುಡುಗಿಗೆ ಸಂದೇಶವ ಕಳಿಸುತ್ತ
ಅವಳಿಂದೆ ಈತ ಬಾಲದಂತೆ ಸುಳಿಯುತ್ತ
ಆ ಹುಡುಗಿಯನ್ನು ಪ್ರೀತಿಸೆಂದು ಕಾಲಿಡಿದು ಬೇಡುತ್ತ
ಒಪ್ಪದಿದ್ದರೆ ಹೋಗಿ ಸಾಯುವೆನೆಂದು ಬೆದರಿಕೆಯ ಹಾಕುತ್ತ
ಹಾದಿಯಲಿ ಅವಳಿಂದೆ ಅವಳೆಸರನ್ನು ಕನವರಿಸುತ್ತ
ಅವನ ಹಳೆ ಹುಡುಗಿಯ ಕಂಡು,
ಬಿದ್ಧನು-ಬಿದ್ಧನು ಮರಳಿ ಬಿದ್ಧನು ನನ್ನ ಗೆಳೆಯ

ಇವನಳೇ ಹುಡುಗಿ ಈತನ ಮುಖವನ್ನು ನೋಡಲು
ಇವನ ಮೇಲೆ ಬೆಂಕಿಯಂತೆ ಕೋಪವನು ತಾಳಲು
ಇಲ್ಲೇನು ಮಾಡುತಿರುವೆ ಬೇಕೂಫನೆ ಎಂದವಳು ಕೇಳಲು
ತಕ್ಷಣ ಅವನಳೆ ಹುಡುಗಿಯ ಹೆಸರನ್ನು ಕನವರಿಸುತ
ಮಾತನ್ನು ಬದಲಿಸಿ, ಮನಸ್ಸನ್ನು ಮಾರಿಸಿ,
ಬಣ್ಣವನ್ನು ಬದಲಾಯಿಸಿ, ಕೊನೆಗೆ ಮುಗ್ಗರಿಸಿ
ಬಿದ್ಧನು-ಬಿದ್ಧನು ಮರಳಿ ಬಿದ್ಧನು ನನ್ನ ಗೆಳೆಯ

ಮತ್ತೇ ಹಳೆ ಹುಡುಗಿಯನ್ನು ಪ್ರೀತಿಸಲಾರಂಭಿಸಿದನು
ನಡೆದದ್ದನ್ನು ಅವಳಿಗೇಳಿ ಕ್ಷಮೆಯನ್ನು ಕೇಳಿದನು
ಹೊಸ ಫೋನಿನಿಂದ ಅವಳಿಗೆ ಸಂದೇಶಗಳ ಕಳುಹಿಸುತ
ತನ್ನ ತಂದೆ ತಾಯಿಗೆ ಅರಿಯದಂತೆ ಅವಳಿಂದೆ ಸುತ್ತುತ್ತಾ
ಹೊಸ ಹುಡುಗಿಯಿಂದ ಒಂದು ಸಂದೇಶ ಬಂದೊಡನೆ
ಅವಳಿಗೂ ಸಂದೇಶಗಳ ಮಾಲೆಯನ್ನು ಮಾರುತ್ತ,
ಬಿದ್ಧನು–ಬಿದ್ಧನು ಮರಳಿ ಬಿದ್ಧನು ನನ್ನ ಗೆಳೆಯ

ಇವನವಳಿಂದೆ ಅಲಿದ ರೀತಿಯಿಂದ ಅವಳಿಗೂ ಪ್ರೀತಿ ಚಿಗುರಿರಲು
ಇವನ ನಂಬರ್ ಅವಳಿಗೆ ನೀರಂತೆ ಸಿಕ್ಕಿರಲು
ನನ್ನನ್ನು ನಿಜಕ್ಕೂ ಪ್ರೀತಿಸುತ್ತಿರುವೆಯಾ ಎಂದವಳು ಕೇಳಲು
ಬರಗೆಟ್ಟ ನಾಯಂತೆ, ಹಿಂದೆ–ಮುಂದೆ ನೋಡದೆ
ಹೌದು ಹೌದೆಂದು ಆಕೆಯನ್ನೂ ಪ್ರೀತಿಸಲಾರಂಭಿಸಿ,
ಬಿದ್ಧನು–ಬಿದ್ಧನು ಮರಳಿ ಬಿದ್ಧನು ನನ್ನ ಗೆಳೆಯ

ಒಂದೇ ಸಮಯಕ್ಕೆ ಇಬ್ಬರೊಡನೆ ಪ್ರೀತಿಯ ಮಾಡುತ್ತ
ಒಬ್ಬಳೊಡನೆ ಮಾತಾಡುತ್ತಿದ್ದರೆ, ಇನ್ನೊಬ್ಬಳಿಗೆ ಸಂದೇಶ ಕಳಿಸುತ್ತ
ಏನಿದು ನೀ ಮಾಡುತ್ತಿರುವುದು ಎಂದರೆ,
ಯವ್ವನವನು ಅನುಭವಿಸಬೇಕು ರಂಜನ್,
ಮುಪ್ಪು ಬಂದರೆ ಮತ್ತೇ ಈ ಅನುಭವ ಬಾರದು ಎನ್ನುತ್ತ,
ಬಿದ್ಧನು–ಬಿದ್ಧನು ಮರಳಿ ಬಿದ್ಧನು ನನ್ನ ಗೆಳೆಯ

ಓದುವುದನು ಮರೆತನು, ಪ್ರೀತಿ ಚಟವ ಕಲಿತನು
ಎಲ್ಲರ ಕಣ್ತಪ್ಪಿಸುತ ತನ್ನ ಚಾಳಿಯನು ಸಾಗಿಸುತ
ತರಗತಿಯ ಬಿಟ್ಟು, ಎಲ್ಲ ಗಲ್ಲಿ–ಗಲ್ಲಿಯಲ್ಲಿ ಅಲಿಯುತ್ತ
ಒಂದೇ ಭಾರಿ ಎರಡು ದೋಣಿಮೇಲೆ ಕಾಲಿಟ್ಟು ನಿಂತು
ಹೊಸಹುಡುಗಿ ಜೊತೆ ಪಾನಿಪುರಿ ತಿನ್ನುವಾಗ ಹಳೆಹುಡುಗಿ ಕಣ್ಣಿಗೆ
ಬಿದ್ಧನು–ಬಿದ್ಧನು ಮರಳಿ ಬಿದ್ಧನು ನನ್ನ ಗೆಳೆಯ

ಅಲ್ಲಿಂದಲೆ ಆ ಹುಡುಗಿ ಎಕ್ಕಡವ ಬೀಸಿದಳು
ಇಲ್ಲಿದ್ದ ಈ ಹುಡುಗಿ, ಬಾಯಲಿದ್ದ ಪಾನಿಯನ್ನು
ಇವನ ಮುಖದ ಮೇಲೆ ಕಕ್ಕಿದಳು
ನಡುರಸ್ತೆಯಲ್ಲಿ ನೂರಾರು ಸಾರ್ವಜನಿಕರೆದುರು
ಸಾಕುಸಾಕೆನ್ನುವಷ್ಟು ಹೊಡೆಯುವಾಗ ಹುಡುಗಿಯರು,
ತರಕಾರಿಕೊಳ್ಳುತ್ತಿದ್ದ ಇವನ ತಾಯಿಯ ಕಣ್ಣಿಗೂ
ಬಿದ್ಧನು–ಬಿದ್ಧನು ಮರಳಿ ಬಿದ್ಧನು ನನ್ನ ಗೆಳೆಯ

ಅಮ್ಮ ಜಗಳ ಬಿಡಿಸಿದರು, ಜೊತೆಗೆ ಇವನ ಭೂತಬಿಡಿಸಿದರು
ಜನ್ಮ ಜಾಲಾಡಿದರು, ಕಾಲೇಜಿಗೆ ಕರೆತಂದರು
ದೂರುಗಳನು ಹೇಳಿದರು, ಶಿಕ್ಷಕರ ಮುಂದೆ ತದುಕಿದರು
ತರಿಸಿದರು ಬೆತ್ತವನ್ನು, ಕರೆಸಿದರು ಅಪ್ಪನನ್ನು,
ಸುಲಿಸಿದರು ಚರ್ಮವನ್ನು, ಸವೆಸಿದರು ಕೈಗಳನ್ನು,
ಇಷ್ಟೆಲ್ಲಾ ಆದಮೇಲೆ ಎಚ್ಚರಗೊಂಡನು ಅವನು
ಫೋನನ್ನು ಎಸೆದನು, ಪುಸ್ತಕವ ತೆರೆದನು,
ಪ್ರೀತಿ–ಪ್ರೇಮವೆಲ್ಲವನ್ನು ಪಾತಾಳದ ಬೆಂಕಿಗೆಸೆದು
ಎದ್ಧನು–ಎದ್ಧನು ಮೇಲೆದ್ಧನು ನನ್ನ ಗೆಳೆಯ..

# ೬. ನನ್ನ ಗೆಳೆಯ-೩

ರಾತ್ರಿ ಊಟ ಮಾಡಲಿಲ್ಲ, ನಿದ್ದೆಯಂತೂ ಬರಲೇ ಇಲ್ಲ
ಸಂಜೆ ತಿಂದೆ ಗೂಸವೇ ಇನ್ನೂ ಜೀರ್ಣವಾಗುತಿಲ್ಲ
ಒಮ್ಮೆ ಹಾಗೆ ಯೋಚಿಸಿದ, ಅಷ್ಟು ಖುಷಿಯಾಗಿದ್ದವನು
ಪ್ರೀತಿಚಟಕೆ ಬಿದ್ದು ಈಗ, ಎಷ್ಟು ನೋವ ತಿಂದೆ ನಾನು,
ಇಲ್ಲ–ಇಲ್ಲ, ಎಲ್ಲಾ ಸರಿ ಮಾಡಬೇಕು ಎಂಬ ಸಂಕಲ್ಪ ಮಾಡಿ
ಆಲಾರಂ ಕೂಗೋ ಮೊದಲೆ, ಹೊಸ ದಿನವನು ಶುರುಮಾಡಿ
ಎದ್ದನು–ಎದ್ದನು ಮೇಲೆದ್ದನು ನನ್ನ ಗೆಳೆಯ

ಪುನಾರಂಭ ಮಾಡಿದನು, ತನ್ನ ಬದುಕನ್ನು ಅವನು
ಮರಳಿದನು ಮೂಲಕ್ಕೆ, ಗೆಳೆಯರಾ ವೃಂದಕ್ಕೆ
ಹುಚ್ಚು ಪ್ರಾಯದ ಕುದುರೆ ಆಗಿದ್ದಂತ ಗಂಡು ಇಂದು
ನಿಜವಾದ ಗಂಡಾಗಿ, ಕುಳಿತನು ಗುಂಡು ಕಲ್ಲಾಗಿ
ದೃಷ್ಟಿ ಕದಲಿಸದಂತೆ ಮೈಯೆಲ್ಲಾ ಕಣ್ಣಾಗಿ,
ಎಲ್ಲಾ ಪಾಠವನ್ನು ಕಲಿತು, ಚುರುಕಾಗಿ
ಎದ್ದನು–ಎದ್ದನು ಮೇಲೆದ್ದನು ನನ್ನ ಗೆಳೆಯ

ಪ್ರೀತಿ ಎಂಬ ಪದವನ್ನೇ ತಲೆಯಿಂದ ಆಚೆಗೆಸೆದನು
ಗೈರು ಹಾಜರಾಗೊ ಪದ್ಧತಿಗೆ ಎಳ್ಳು ನೀರು ಬಿಟ್ಟನು
ಹಣವನ್ನು ಕೂಡಿಟ್ಟನು, ಆಸೆಗಳನು ಹಿಡಿದಿಟ್ಟನು,
ಜವಾಬ್ದಾರಿಯಿಂದ ಅಪ್ಪ ಅಮ್ಮನೆದುರು ಓದಿದನು
ಊಟ ಮಾಡು ಬಾ ಮಗನೆ ಎಂದು ಅಮ್ಮ ಕರೆದಾಗ
ಇಲ್ಲ ನಾನು ಓದಬೇಕು, ನೀವು ತಿಂದು ಮಲಗಿ ಎಂದು,
ಎದ್ದನು–ಎದ್ದನು ಮೇಲೆದ್ದನು ನನ್ನ ಗೆಳೆಯ

ವೇಳಾಪಟ್ಟಿ ಮಾಡಿದನು, ನಿದ್ದೆ ಕಟ್ಟಿ ಓದಿದನು
ಊಟಮಾಡುವಾಗಲೂ ಉತ್ತರಗಳ ಉಗುಳಿದನು
ಹುಚ್ಚನಾಗಿರುವೆಯಾ ಎಂದು ನಾನು ಕೇಳಿದಾಗ
ಓದಬೇಕು ರಂಜನ್ ಓದಬೇಕು ಇನ್ನೂ
ಇವಾಗ ಓದದಿದ್ದರೆ ಮುಂದೆ ಗಾರೆ ಕಲಸಬೇಕು ಎಂದು,
ಎದ್ದನು–ಎದ್ದನು ಮೇಲೆದ್ದನು ನನ್ನ ಗೆಳೆಯ

ಪ್ರಶ್ನೆಗಳನು ಕೇಳಿದನು, ಚರ್ಚೆಗಳನು ಮಾಡಿದನು,
ಗುರುಗಳೇ ಕಕ್ಕಾ–ಬಿಕ್ಕಿ ಆಗುವಂತೆ ಮಿಂಚಿದನು
ಮೊದಲೊಮ್ಮೆ ಕೆರದಲ್ಲಿ ಹೊಡೆದಿದ್ದ ಗುರುಗಳಿಗೆ
ಅಚ್ಚು ಮೆಚ್ಚಿನ ಶಿಷ್ಯನಾಗಿ ಮನ್ನಣೆಯ ಪಡೆದನು
ಹುಡುಗಿಯರೇ ಬಳಿ ಬಂದು ಹೇಳಿಕೊಡು ಎಂದಾಗ,
ಎದ್ದನು–ಎದ್ದನು ಮೇಲೆದ್ದನು ನನ್ನ ಗೆಳೆಯ

ತರಗತಿ ಪರೀಕ್ಷೆಯಲ್ಲಿ ಎಂಬತ್ತರ ಗಡಿ ದಾಟಿದನು
ಸಾಲದು ಸಾಲದು ಇದು ಸಾಲದೆಂದು ಸಾರಿದನು
ಮುಖ್ಯ ಪರೀಕ್ಷೆಗೆ ಇನ್ನೂ ಶ್ರಮ ಹಾಕಿದನು
ಪೋಷಕರ ಸಭೆಗೆಂದು ತಂದೆ ತಾಯಿಯ ಕರೆತಂದನು
ಅಧ್ಯಾಪಕರೆಲ್ಲರೂ ಅದ್ಭುತ ಬದಲಾವಣೆ ಎಂದು
ಬಹಳವಾಗಿ ಹೊಗಳಿದಾಗ, ಹರುಷದಿಂದ
ಎದ್ದನು–ಎದ್ದನು ಮೇಲೆದ್ದನು ನನ್ನ ಗೆಳೆಯ

ಎಲ್ಲಾ ಪಾಠ ಕಲಿತನು, ಪರೀಕ್ಷೆಗೆ ಕುಳಿತನು,
ಹೊರಜಗವ ಮರೆತನು, ಓದಿದ್ದನ್ನು ನೆನೆದನು,
ಮತ್ತೆ ಮತ್ತೆ ಹಾಳೆ ಪಡೆದು, ಎಲ್ಲರೂ ಬೆಪ್ಪಾಗುವಂತೆ
ಹೆಚ್ಚುವರಿ ಪ್ರಶ್ನೆಗಳಿಗೂ ಉತ್ತರಗಳ ಬರೆದನು
ಹಿಂದೆ ಇದ್ದ ಮಾಜೀ ಪ್ರೇಯಸಿ, ನೀನೆಂದರೆ ಇಷ್ಟ ನನಗೆ
ಸ್ವಲ್ಪ ಹೇಳಿಕೊಡುವೆಯಾ ಎಂದು ಕೇಳಿಕೊಂಡಾಗ,
ಹೋಗೇ ಕಪಿತುಲ್ಲೆ ಎಂದು,
ಎದ್ದನು–ಎದ್ದನು ಮೇಲೆದ್ದನು ನನ್ನ ಗೆಳೆಯ

ಪರೀಕ್ಷೆಯೆಲ್ಲಾ ಮುಗಿಯಿತು ಫಲಿತಾಂಶಕೆ ಕಾದನು
ಮುಂದಿನೋದಿಗಾಗಿ ಹಣವ, ತಾನೇ ದುಡಿಯಲಿಳಿದನು
ಫಲಿತಾಂಶ ಬರೋ ದಿನ ಕೆಲಸಕ್ಕೆ ರಜೆಹಾಕಿದನು
ಪರಿಶ್ರಮವ ನಂಬಿ ಆತ, ಫಲ ಬಯಸುತ ಕುಳಿತನು
ಫೋನನ್ನು ತೆಗೆದನು, ಫಲಿತಾಂಶವ ನೋಡಿದನು,
ಹುಚ್ಚೆದ್ದು ಕುಣಿದನು, ಹೆತ್ತವರಿಗೆ ಹೇಳಿದನು,
ತೊಂಬತ್ತೈದು ಪ್ರತಿಶತವನು ಕಲೆಹಾಕಿದ ಕಂದ ಎಂದು,
ಅಪ್ಪ ಅಮ್ಮನ ಕಣ್ಣಲ್ಲಿ ಖುಷಿಯನ್ನು ಕಂಡನು
ಏಕೋ ಇದ್ದಕ್ಕಿದ್ದ ಹಾಗೆ, ಬಿಕ್ಕಿ–ಬಿಕ್ಕಿ ಬಿಕ್ಕಿ–ಬಿಕ್ಕಿ
ಅತ್ತನು–ಅತ್ತನು ತಬ್ಬಿ ಅತ್ತನು ನನ್ನ ಗೆಳೆಯ
ಗೆದ್ದನು–ಗೆದ್ದನು ಕೊನೆಗೂ ಗೆದ್ದನು ನನ್ನ ಗೆಳೆಯ..

# ೭. ತಡರಾತ್ರಿಯಲ್ಲಿ

ಕತ್ತಲ ಸುಡುಗಾಡಿನಲಿ
ನಡೆದೆ ನಾ ಬರಿಗಾಲಿನಲಿ
ಕಲ್ಲು ಮುಳ್ಳಾ ಲೆಕ್ಕಿಸದೆ
ಬರುವಪಾಯವ ಊಹಿಸದೆ

ಚಂದ್ರನಿರದಾ ರಾತ್ರಿಯದು
ಪ್ರೇತಗಳಾ ನಿವಾಸವದು
ಕುನ್ನಿಗಳು ಕೂಗುತಲಿರಲು
ನಡುಕ ಹುಟ್ಟಿಸಿತಾ ಇರುಳು

ಸುತ್ತ ಹೆಣಗಳು ಮಲಗಿರಲು
ಜೋರು ಗಾಳಿ ಬೀಸಿರಲು
ಮೈ ನಡುಗಿಸೊ ಚಳಿಯಲ್ಲಿ
ಉರಿವ ಹಣತೆಯ ಬೆಳಕಲ್ಲಿ

ಹೆಜ್ಜೆ ಹಾಕಿದೆ ರೋಷದಲಿ
ಗೋರಿಗಳನೇ ನೋಡುತಲಿ
ದೂರ ಯಾರೋ ನಿಂತಿರಲು
ಕೈಯ ಬೀಸಿ ಕರೆದಿರಲು

ಶಿರವೆ ಇಲ್ಲದ ರೂಪವದು
ನಿಂದು ನನ್ನನೆ ಕಾದಿಹುದು
ಬಿರುಗಾಳಿಯು ಬೀಸುತಿದೆ
ಹಣತೆ ಜೀವ ಹೋಗುತಿದೆ

ರಕ್ತ ಹೆಪ್ಪು ಗಟ್ಟುತ್ತಿದೆ
ಎದೆಯು ಢಗ ಢಗ ಬಡಿಯುತಿದೆ
ಮುಂದೆ ದಾರಿ ಕಾಣಿಸದೆ
ಒಂದು ಗೋರಿಗೆಡವಿ ಬಿದ್ದೆ

ತಲೆ ಎತ್ತಿ ನೋಡಿದೆನು
ಮುಂದೆ ಮುಂದೆ ಓಡಿದೆನು
ಮುಂದೆ ಯಾರು ಕಾಣುತಿಲ್ಲ
ಎದೆ ಬಡಿತ ನಿಲ್ಲುತಿಲ್ಲ

ಸನಿಹ ಯಾರೋ ಅಳುತಿಹರು
ನನ್ನನೇ ಕೂಗುತಿಹರು
ಅಳುವ ರಾಗಕೆ ಕಿವಿಕೊಡದೆ
ಭಯದಿಂದಲೆ ಮುನ್ನಡೆದೆ

ಬೆಳಕು ದೂರದಿ ಕಾಣಿಸಲು
ಅಡ್ಡ ಹಲವರು ನಿಂತಿರಲು
ರಂಜನ್ ನೋಡಿ ನಗುತಿರಲು
ಮನದಿ ದಿಗಿಲು ಹೆಚ್ಚಾಗಲು

ಸುತ್ತ ಯಾವ ದಾರಿ ಕಾಣದೆ
ಹಾಗೆ ಮೆಲ್ಲನೆ ಹಿನ್ನಡೆದೆ
ಹಾಗೆ ಹಿಂದೆ ತಿರುಗಿದೆನು
ಭೂತಗಳನು ನೋಡಿದೆನು

ನನ್ನ ಮುಖವ ನೋಡಿದವು
ಕುತ್ತಿಗೆಗೆ ಬಾಯಾಕಿದವು
ರಕ್ತ ಚಿರ್ರನೆ ಚಿಮ್ಮುತಿದೆ
ಭೂತಗಳು ಅದನೀರುತಿವೆ

ನೋವಿನಿಂದ ಕೂಗುತಿಹೆನು
ವಿಲ ವಿಲ ಒದ್ದಾಡುತಿಹೆನು
ಎಲ್ಲ ಗೋರಿಯ ಮಾಲಿಕರು
ನನ್ನ ಪ್ರಾಣವ ಹಿಂಡುತಿಹರು

ದೇಹದಿಂದ ಹೊರಬಂದೆನು
ನನ್ನ ದೇಹವ ನಾನೆ ತಿಂದೆನು
ಹೊಟ್ಟೆಯನ್ನು ಸೀಳಿದೆನು
ರಕ್ತವನ್ನು ಹೀರಿದೆನು

ಈಗ ನಾನು ಸತ್ತಿರುವೆ
ಪ್ರೇತವಾಗಿ ಅಲಿಯುತಿರುವೆ
ಯಾರು ಬರುವರೊ ಕಾಯುತಿರುವೆ
ಹಿಂದೆ ನೋಡಿದರೆ ಸಾಯಿಸುವೆ

ಪ್ರತಿದಿನ ತಡರಾತ್ರಿಯಲಿ
ಕತ್ತಲ ಸುಡುಗಾಡಿನಲಿ
ಪ್ರೇತವಾಗಿ ಕಾಯುತಿರುವೆ
ಹಿಂದೆ ನೋಡುವರ ಸಾಯಿಸುವೆ

ಪ್ರೇತವಾಗಿ ಕಾಯುತಿರುವೆ
ಹಿಂದೆ ನೋಡುವರ ಸಾಯಿಸುವೆ
ಪ್ರೇತವಾಗಿ ಕಾಯುತಿರುವೆ
ಹಿಂದೆ ನೋಡುವರ ಸಾಯಿಸುವೆ..

# ೮. ಕುದಿವ ರಕ್ತ

ಹೊಡಿ ಗುದ್ದು ಬಡಿ ಜಜ್ಜು
ಪುಡಿಗೈ ಈ ಪುಂಡರನ್ನು
ಬಿಸಿ–ಬಿಸಿ ರಕ್ತ ನಿಂದು
ಸುಡು ಈ ಶಂಡರನ್ನು

ಹೆತ್ತವರ ನಿಂದಿಸುವ
ತನ್ನ ತಾನು ಬಣ್ಣಿಸುವ
ಮಾತಿನಲೇ ವಿಷ ಬೆರೆಸಿ
ಜಗಳವನ್ನು ತಂದಿಡುವ

ನೀಚ ನಾಮರ್ದರ
ನಾಲಿಗೆಯನು ಸೀಳಿ ಹಾಕು
ಮತ್ತೆ ಉಸಿರೆತ್ತದಂತೆ
ಹೊಡಿ ಗುದ್ದು ಬಡಿ ಜಜ್ಜು

ಮಾನವೀಯತೆಯ ಮರೆತು
ಮೋಸ ಮಾಡಿ ಖುಷಿ ಪಡುವ
ಮುಗ್ಧರೆಂದು ದರ್ಪದಲಿ
ಅಮಾಯಕರ ಸುಲಿಗೆಗೈವ

–ಮೃಗಗಳನ್ನು ಕಂಡರೆ
ಸುಮ್ಮನಂತು ಕೂರಬೇಡ
ಜ್ವಾಲೆಯಂತೆ ಕುದಿವ ರಕ್ತ
ನಿನ್ನದೆಂದು ಮರೆಯಬೇಡ

ಏಳು ನಡೆ ನುಗ್ಗು ಹೊಡೆ
ಮತ್ತೆ ದರ್ಪ ತೋರದಂತೆ
ಜೀವನವಿಡಿ ಮರೆಯದಂತೆ
ಹೊಡಿ ಗುದ್ದು ಬಡಿ ಜಜ್ಜು

ಹಿರಿಯರಿಗೆ ಮರ್ಯಾದೆ ಕೊಡದೆ
ಗುರುಗಳನ್ನು ಗೌರವಿಸದೆ
ಕಿರಿಯರೆಂದು ಕ್ಷೀಣವಾಗಿ
ಕಾಣುವಂತ ಕುನ್ನಿಗಳನು

ಹುಡುಗಿಯರ ಚುಡಾಯಿಸುತ
ಹೆಣ್ಣನ್ನು ಹೀನವಾಗಿ
ಅಪಹಾಸ್ಯ ಮಾಡುವಂತ
ಮಧ–ಮೋಹಿ ಅಧಮರನ್ನು

ಅಟ್ಟಾಡಿಸಿಕೊಂಡು ಹೋಗಿ
ಅಡ್ಡಗಟ್ಟಿ ನಿಲ್ಲು
ಅವರ ಕೊಬ್ಬನ್ನು ಕೊಲ್ಲು
ಅವರ ನರವನ್ನು ಸೀಳು

ಸಿಡಿ ಬಡಿ ಹೊಡಿ ಗುಡುಗು
ಈ ಭೂಮಿ ಕಂಪಿಸುವಂತೆ
ನೀಚರೆದುರು ಸಿಡಿ ನೀನು
ದಡಿಗ ಮಹಾ ಮದ್ದಿನಂತೆ

ಮದ್ದಾನೆ ಬಲ ನಿನದು
ಕುದಿಕುದಿವ ರಕ್ತ ನಿನದು
ಸುಟ್ಟಾಕೀ ಶಂಡರನ್ನು
ಕಿಡಿಗೇಡಿ ಪುಂಡರನ್ನು

ಅನ್ಯಾಯವ ಕಂಡು
ಕಣ್ಣೆಳಿಸಿ ಕೂರಬೇಡ
ದರ್ಪತೋರುವವರ ಎದುರು
ತಲೆ ತಗ್ಗಿಸಿ ನಿಲ್ಲಬೇಡ

ಹೊಡಿ ಗುದ್ದು ಬಡಿ ಜಜ್ಜು
ಕೀಳವರ ಕಣ್ಣನ್ನು
ಎಲುಬಿಲ್ಲದ ನಾಲಿಗೆಯನ್ನು
ಪುಡಿ–ಪುಡಿ ಮಾಡವರ ಮೂವತ್ತೆರಡಲ್ಲನ್ನು

ಏಳು ನಡೆ ನುಗ್ಗಿ ಹೊಡೆ
ಕುದಿ–ಕುದಿವ ರಕ್ತ ನಿಂದು
ಸುಡು–ಸುಡುವ ಜ್ವಾಲೆಯಂತೆ
ಸುಟ್ಟಾಕಾ ಅಧಮರನ್ನು..

# ೬. ಇವರ ಜಗಳ

ನಮ್ಮೆಲ್ಲರ ಎದುರಿಗೊಂದು
ಮುದ್ದಾದ ಹುಡುಗಿ
ಕಿರುನಗೆಯ ಬಿಡಿ ಮುಡಿಯ
ಬೆಳದಿಂಗಳ ಬೆಡಗಿ

ನಮ್ಮುಡಗರೆಲ್ಲ ಆದರು
ಅವಳಿಗೆ ದಾಸರು
ಅವಳಂದವ ನೋಡುತ
ಮೈಮರೆತು ಕುಂತರು

ಕುಂತಲ್ಲೇ ಅವಳನ್ನು
ದಿಟ್ಟಿಸಿ ನೋಡುತ್ತ
ಅವಳೊಮ್ಮೆ ನೋಡಲೆಂದು
ಮಂತ್ರಗಳಾ ಹೇಳುತ್ತ

ನನ್ನವಳು ನನ್ನವಳು
ಎಂದಿವರ ಜಗಳ
ಹೊಡೆದಾಡಲು ಅವಳೇನು
ರಂಭೆ ಊರ್ವಶಿಯರ ಮಗಳ?

ಈ ವರ್ಷ ವೀರರಂತೆ
ಇರುತ್ತೇವೆ ಅಂದವರು
ಅವಳನ್ನು ನೋಡಿ ತಮ್ಮ
ಶಪಥವನ್ನು ಮರೆತೋದರು

ಅವಳ ಸಿಂಗಾರ ಕಂಡು
ಮತ್ತೇರಿತಿವರ ಮನಸಿಗೆ
ಮತ್ತೆ ಜೀವ ಬಂತು ಇವರ
ಮನದ ಮೂಢ ಆಸೆಗೆ

ಒಬ್ಬರ ಮೇಲೊಬ್ಬರು
ಬಿದ್ದು-ಬಿದ್ದು ನೋಡುತಿಹರು
ಪಕ್ಕದಲ್ಲೆ ಗುರುಗಳು
ಇರುವರೆಂದು ಮರೆಯುತಿಹರು

ಅವಳ ನೋಡುವುದೇ ಸಾಕು
ಪಾಠವೆಲ್ಲ ಕೇಳಲ್ಲ
ಆ ಆಕರ್ಷಣೆ ಸಾಕು ಇನ್ನು
ಬೇರೆ ಯಾರು ಬೇಕಿಲ್ಲ

ತಂಗಿಯಂತೆ ಅವಳು
ಹಾಗೆ ನೋಡಬೇಡಿ ಎಂದರೆ,
"ಇಲ್ಲ ಎಲ್ಲ ತಂಗಿರಾದ್ರೆ
ನಮ್ಮ ಯವ್ವನಕ್ಕೆ ತೊಂದರೆ

ಅವಳ ಪ್ರೀತಿಗಾಗಿ ಮತ್ತೆ
ಒಂದು ವರ್ಷ ಓದುವೆವು
ಓದುವುದು ಎಲ್ಲಿ ಅವಳ
ನೋಡುತ ನಾವ್ ಕೂರುವೆವು"

ಇಷ್ಟು ಜನರಲ್ಲಿ ಅವಳು
ಯಾರನೆಂದು ಪ್ರೀತಿಸುವಳು?
"ಯಾರು ಇಲ್ಲ ರಂಜನ್
ಅವಳು ನನ್ನನ್ನೇ ಪ್ರೀತಿಸುವಳು"

ನನ್ನವಳು ನನ್ನವಳು ಎಂದು
ಮತ್ತೆ ಇವರ ಜಗಳ
ಹೊಡೆದಾಡಲು ಅವಳೇನು
ರಂಭೆ ಊರ್ವಶಿಯರ ಮಗಳ?..

ನನ್ನವಳು ನನ್ನವಳು ಎಂದು
ಮತ್ತೆ ಇವರ ಜಗಳ
ಹೊಡೆದಾಡಲು ಅವಳೇನು
ರಂಭೆ ಊರ್ವಶಿಯರ ಮಗಳ?..

# ೧೦. ಅಮರ

ಅವಳದೇ ಧ್ಯೇಯ
ಈ ಮನದಲ್ಲಿ ಹಗಲಿರುಳು
ಅವಳ ತುಂಟಾಟ
ಕಾಡುವುದು ಕನಸಿನಲ್ಲಿ ಈಗಲೂ

ನಾನವಳ ಕಾಲ ಬಳಿ
ತಲೆಯಿಟ್ಟು ಮಲಗಿದರೆ
ತಂಗಾಳಿ ಬೀಸುತ
ನನ್ನ ಮಲಗಿಸುತ ಇದ್ದಳು

ಮಲಗಿದಾಗ ಸೂರ್ಯ
ನಮ್ಮ ಪ್ರೀತಿ ಕಂಡು ಕಾವೆರೆದರೆ
ಅವಳ ಜಡೆಯಿಂದ
ನನಗವಳು ತಂಪನೆರೆಯುತ್ತಿದ್ದಳು

ಅವಳ ಜಡೆ ಹಿಡಿದು
ನಾನು ಆಟವಾಡುತ್ತಿದ್ದರೂ
ಕೊಂಚ ಕೂಡ ಜರಿಯದೇ
ಖುಷಿಯಿಂದ ನಲಿಯುತ್ತಿದ್ದಳು

ಅವಳ ನನ್ನ ಪ್ರೇಮ
ಹೂದೋಟಕಿಂತ ಸುಂದರ
ಅವಳ ನನ್ನ ಪ್ರೇಮ
ಸೂರ್ಯ ಚಂದ್ರರಂತೆ ಅಮರ॥

ಅಂದಹಾಗೆ ಅವಳು
ಎಂದಿಗೂನು ಮಾತನಾಡಿಲ್ಲ
ನಾ ಹಾಡುವ ಕವಿತೆ ಕೇಳಿ
ಎಂದು ಕೂಡ ನಕ್ಕಿಲ್ಲ

ಜನ ಕರೆಯುವರು
ಅವಳ "ಆಲದಮರ"
ಅವಳು ನಿಂತ ಜಾಗದಿಂದ
ಒಂದು ಹೆಜ್ಜೆ ಕೂಡ ಕದಲಲ್ಲ

ಅಚ್ಚ ಹಸಿರಿನೆಲೆಗಳು
ಉದ್ದ–ಉದ್ದ ಬೇರುಗಳು
ಅವೇ ನನ್ನ ಪಾಲಿಗೆ
ಸುಗಂಧಮಯ ಜಡೆಗಳು

ಮಳೆ ಬಿಸಿಲಿನಲ್ಲಿ
ತಾನೊಬ್ಬಳೇ ನೆನೆಯುತ
ನನಗೇನೂ ಆಗದಂತೆ
ಕೊಡೆಯಾಗುತ್ತಿದ್ದಳು

ಅದ್ಯಾರ ಕಣ್ಣು ಬಿತ್ತೊ ಕಾಣೆ
ನಮ್ಮಿಬ್ಬರ ಪ್ರೀತಿ ಮೇಲೆ
ನನ್ನಿಂದ ಅವಳು ದೂರ ದೂರವಾದಳು
ದೂರವಾಗಿ ಹೋದಳು

ಅವಳ ನನ್ನ ಪ್ರೇಮ
ಹೂದೋಟಕಿಂತ ಸುಂದರ
ಅವಳ ನನ್ನ ಪ್ರೇಮ
ಸೂರ್ಯ ಚಂದ್ರರಂತೆ ಅಮರ..‖

ಇದ್ದಕ್ಕಿದ್ದ ಹಾಗೆ ಕೆಲವು
ಕೆಟ್ಟ ಜನರು ಬಂದರು
ಅವಳ ಜಡೆಯನ್ನು ಎಳೆದು
ರೆಂಬೆ ಕೊಂಬೆಗಳನು ಮುರಿದು

ಕೊಡಲಿಯಿಂದ ಅವಳಿಗೊಡೆದು
ಅವಳ ದೇಹವನ್ನು ಕೊಯ್ದು
ಮೂಗಿಯೆಂಬ ಕಾರಣಕ್ಕೆ
ಅವಳ ಇಡೀ ಜೀವವನ್ನೇ ಬುಡಸಮೇತ ಕಿತ್ತು
ಅವಳ ನಾಶ ಮಾಡಿ ಹೋದರು
ಸರ್ವ ನಾಶ ಮಾಡಿ ಹೋದರು

ಅದೆಂತ ಕ್ರೂರ ಜನರೋ ಕಾಣೆ
ಅದೇನು ಲಾಭ ಬಂತೋ ಕಾಣೆ
ಪೆನ್ನ ಬದಲು ರಂಜನ್ ಕೈಲಿ ಇದ್ದಿದ್ದರೆ ಗನ್ನು
ಗುಂಡಿಕ್ಕಿ ಕೊಲ್ಲುತ್ತಿದ್ದೆ ಆ ಪಾಪಿಗಳನು

ದಯಮಾಡಿ ಹೇಳಿ ನನಗೆ
ಓ ದುಷ್ಟ ಜನರೇ
ಆ ಮುಗ್ಧ ಮರವು
ನಿಮಗೆ ಮಾಡಿದಂತ ದ್ರೋಹವೇನು?

ನನ್ನ ಮನವು ನೋವ ಸಹಿಸುತಿಲ್ಲ
ನಿಮ್ಮ ಬಳಿ ಯಾವ ಉತ್ತರವೂ ಇಲ್ಲ
ಒಂದಲ್ಲ ಎರಡಲ್ಲ ನೂರು ವರುಷ ಕಳೆದರೂ
ನಾನು ಮಾತ್ರ ಅವಳ ಆ ಶುದ್ಧ ಪ್ರೇಮ ಮರೆಯಲ್ಲ

ಅವಳ ನನ್ನ ಪ್ರೇಮ
ಹೂದೋಟಕಿಂತ ಸುಂದರ
ಅವಳ ನನ್ನ ಪ್ರೇಮ
ಸೂರ್ಯ ಚಂದ್ರರಂತೆ ಅಮರ..॥

# ೧೧. ಐದು ದಿನದ ಪ್ರೀತಿ

ಐದು ದಿನದ ಪ್ರೀತಿ
ಐದು ವಿವಿಧ ಭಾವ
ಅಂದುಕೊಂಡೆ ನಿಮ್ಮಪ್ಪ
ಆಗುವರು ನನಗೆ ಮಾವ

ಮೊದಲನೇ ದಿನ,
ಕಾರಣವಿಲ್ಲದ ಕೋಪ
ಏರುತ್ತಿತ್ತು ಮೈ ತಾಪ
ಆಜನ್ಮ ವೈರಿಗಳಂತೆ
ಹಾಕುತ್ತಿದ್ದೆವು ನಾವ್ ಶಾಪ.

ಎರಡನೇ ದಿನ,
ಕೋಪ ಗೆಳೆತನಕ್ಕೆ ಮಾರಿತು
ಮೈ ತಾಪವೆಲ್ಲ ಹಿಮದಂತೆ ತಣ್ಣಗಾಯಿತು
ವೈರಿಗಳಾದ ನಾವು
ಕೈಕುಲುಕುವ ದಿನ ಬಂದಿತು.

ಮೂರನೇ ದಿನ,
ಗೆಳೆಯರಾದ ನಾವು ಆದೆವು ಆಪ್ತಮಿತ್ರರು
ಒಂದು ಕ್ಷಣ ಬಿಟ್ಟಿರದಂತ ಆಪ್ತ ಪ್ರಾಣ ಮಿತ್ರರು
ಜೊತೆಗೇ ಇರುತ್ತಿದ್ದೆವು ಯಾವಾಗ ಎಲ್ಲೆ ಹೋದರು
ಕಾಲೇಜು ಬಿಟ್ಟು ಅಲೆಯುತ್ತಿದ್ದೆವು, ನಾವಿಬ್ಬರು ಊರೂರು.

ನಾಲ್ಕನೇ ದಿನ,
ಗೆಳೆತನದಿಂದ ಶುರುವಾಯಿತು ನಮ್ಮೆದೆಯಲ್ಲಿ ಪ್ರೇಮ
ಆಗಾಗ ಕೆನ್ನೆ ಮೇಲೆ ಕೊಡುತ್ತಿದ್ದೆವು ಉಮ್ಮ
ನೀನೇ ರಾಣಿ ನಾನೇ ರಾಜ ನಮ್ಮದೇ ಲೋಕದಲಿ
ಮರ–ಬೆಂಚು–ಬಂಡೆ ಮೇಲೆ ನಮ್ಮದೇ ನಾಮ.

ಐದನೇ ದಿನ,

ನನಗೆ ನೀನ್ಯಾರೋ, ನಿನಗೆ ನಾನ್ಯಾರೋ
ನಮ್ಮಿಬ್ಬರ ನೋಡಿ ನಗುತಿರುವವರು ಯಾರ್ಯಾರೋ
ರಂಜನ್ ಪ್ರಾಣಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ನಿನ್ನನ್ನು
ಪಾರ್ಕಿನಲ್ಲಿ ತಬ್ಬಿಕೊಂಡು ಕುಳಿತಿದ್ದರು ಮತ್ಯಾರೋ.

ಐದು ದಿನದ ಪ್ರೀತಿ
ಐದು ವಿವಿಧ ಭಾವ
ಅಂದುಕೊಂಡೆ ನಿಮ್ಮಪ್ಪ
ಆಗುವರು ನನಗೆ ಮಾವ ॥

ಜಗಳದಲ್ಲಿ ಶುರುವಾಗಿ
ಜಗಳದಲ್ಲೆ ಮುಗಿದೋಯಿತು
ಐದು ದಿನದ ಪ್ರೀತಿಯಾಟ
ಐದು ದಿನದ ಮೋಸದಾಟ

ಪಾಠ ಕೇಳುವಾಗಲೂ
ನೆನಪಾಗುತ್ತಿತ್ತು ನಿನ್ನ ನೋಟ
ನೀ ದೂರವಾದರೂ ಚಿಂತೆಯೇನಿಲ್ಲ
ಇಳಿದೋಯಿತೆಂದುಕೊಳ್ಳುವೆ ಹೆಗಲಿಂದ ಒಂದು ಕಾಟ

ಐದು ದಿನದ ಪ್ರೀತಿ
ಐದು ವಿವಿಧ ಭಾವ
ಅಂದುಕೊಂಡೆ ನಿಮ್ಮಪ್ಪ
ಆಗುವರು ನನಗೆ ಮಾವ...॥

# ೧೨. ದುಂಬಿ

ಇದ್ದೆ ನಾನು ಹೂವಿನಂತೆ
ಬಂದಳವಳು ದುಂಬಿಯಂತೆ
ಪ್ರೀತಿಯಿಂದ ಮುತ್ತನಿಟ್ಟು
ಹೀರಿದಳು ರಸವ ತಿಗಣೆಯಂತೆ

ಪ್ರೀತಿಸುತ್ತಿದ್ದೆ ಹುಚ್ಚನಂತೆ
ಜೊತೆಗಿದ್ದಳವಳು ನೆರಳಿನಂತೆ
ಆವರಿಸಿದಳು ಮನವ
ಮುಂಜಾನೆಯ ರವಿ ಕಿರಣದಂತೆ

ನನ್ನ ಹೂಮನವ ಮುರಿದಳು ಕ್ರೂರಿಯಂತೆ
ಬಿಟ್ಟು ಹೊರಟು ಹೋದಳು ಗಾಳಿಯಂತೆ
ಕೇವಲ ರಂಜನ್ ರಸವನ್ನಲ್ಲ,
ಸಿಕ್ಕ–ಸಿಕ್ಕ ಹೂವುಗಳ ರಸವನ್ನೂ
ಹೀರುತ್ತಿದ್ದಳವಳು ಸೂಳೆಯಂತೆ...

# ೧೩. ನನಗಲ್ಲ

ಮಾತಿಲ್ಲ, ಕಥೆಯಿಲ್ಲ, ಅವಳೆದುರು ಬರುತಿಲ್ಲ,
ಎದುರಿರುವ ಕದತಟ್ಟೊ ತುಸು ಧೈರ್ಯ ನನಗಿಲ್ಲ,
ಶುರುವಿಲ್ಲ, ಕೊನೆಯಿಲ್ಲ, ಈ ಪ್ರೀತಿ ಫಲಿಸಲ್ಲ,
ಯಾರಿಲ್ಲ ಬಳಿಯಲ್ಲಿ ಆದರೂ ನೋವಿಲ್ಲ,
ಅಳುವಿಲ್ಲ, ನಗುವಿಲ್ಲ, ಮಲಗಿದರೆ ಕನಸಿಲ್ಲ,
ಅವಳಿದ್ದರೆ ನಾನಿಲ್ಲ, ನಾನಿದ್ದರೆ ಅವಳಿಲ್ಲ,,

ಮನಸಿಲ್ಲ ಮುಳುಗಲು, ಆದರೂ ವಿಧಿಯಿಲ್ಲ,
ಬಯಸಿಲ್ಲ ಬರಲೆಂದು, ಬಂದರೂ ಖುಷಿಯಿಲ್ಲ,
ಒಂದಲ್ಲ, ಎರಡಲ್ಲ, ಭಾವಗಳು ಮುಗಿಯಲ್ಲ,
ಕೊರಗಿಲ್ಲ, ಕರಗಿಲ್ಲ, ಕಥೆ ಕೇಳೊ ಕಿವಿಯಿಲ್ಲ,
ತಲೆಯಿಲ್ಲ, ಬುಡವಿಲ್ಲ, ರಂಜನ್–ಪದ ಪದವಲ್ಲ,
ಅವಳೆಂದು ಯಾರಿಲ್ಲ, ಯಾರಿದ್ದರು ನನಗಲ್ಲ..

# ೧೪. ಪ್ರಣಯದಲ್ಲಿ ನಾನು

ಎರಡು ತಿಂಗಳಿಂದ ಇರಲಿಲ್ಲ ಈ ನಾಚಿಕೆ
ತವಕ–ತವಕ ಭಯ, ಮರಿಹಾಕಿದ ಬೆಕ್ಕಿನಂತೆ
ಹೇಗಿದ್ದ ಹುಡುಗ ಈಗ ಆದೆ ನಾನು ಪೋಲಿಯಂತೆ
ನೂರು ಭಾರಿ ಫೇಲಾದರು ಹೆದರುತ್ತಿರಲಿಲ್ಲ ನಾನು
ಇಂದು ಅವಳ ಮುಖವನ್ನು ನೋಡಲೂನೂ ನಾಚಿಕೆ

ಹಿಂದೆ–ಹಿಂದೆ ಸುತ್ತುತಿದ್ದೆ
ಕದ್ದು–ಕದ್ದು ನೋಡುತಿದ್ದೆ
ಉತ್ಸಾಹದಿಂದ ಅವಳ
ಪ್ರೀತಿಯಲ್ಲಿ ಮುಳುಗುತಿದ್ದೆ

ಮುಳುಗಿ–ಮುಳುಗಿ ಹೋದರೂನು
ಪ್ರಜ್ಞೆಯೇ ಇರಲಿಲ್ಲ
ತಪ್ಪು–ತಪ್ಪು ಎಂದು ನನಗೆ
ಎಲ್ಲ ಬುದ್ಧಿ ಹೇಳಿದರೂ
ಸರಿ–ಸರಿ ಎಂದು
ಸಿಹಿ ಹೊಂಡದಲ್ಲಿ ಈಜುತಿದ್ದೆ

ಕಾಣುತಿದ್ದೆ ಕನಸ, ಅವಳು
ನಮ್ಮಮ್ಮನ ಸೊಸೆಯೆಂದು
ಒಪ್ಪಿಸಿದ್ದೆ ಮನಸ
ಪ್ರೀತಿ ಮಾಡು ಅವಳು ಸಿಗುವಳೆಂದು

ರೆಕ್ಕೆ ಇಲ್ಲದೇನೆ ನಾನು
ಹಾರುತಿದ್ದೆ ಹಕ್ಕಿಯಂತೆ
ಪುಕ್ಕ ಇಲ್ಲದೇನೆ ನಾನು
ಕುಣಿಯುತಿದ್ದೆ ನವಿಲಿನಂತೆ

ತುಡಿತ–ತುಡಿತ–ತುಡಿತ
ಅವಳ ಉತ್ತರವ ನೆನೆಯುತ
ಪುಳಕ–ಪುಳಕ–ಪುಳಕ
ನೋಡಿದಾಗ ಅವಳು ನಗುತ್ತ

ತಾಳು ತಾಳು ರಂಜನ್
ಅವಳಿನ್ನೂ "ಹೂ" ಅಂದೇ ಇಲ್ಲ
"ಹೂ" ಅನ್ನಲವಳು, ನಾನಿನ್ನು
ಅವಳಿಗೇಳೇ ಇಲ್ಲ

ಹೇಳಲೆಂದೆ ಅವಳಿಗಾಗಿ
ಗುಲಾಬಿಯ ತೆಗೆದುಕೊಂಡೆ
ಬಾಯ ಸಿಹಿ ಮಾಡಲೆಂದು
ಚಾಕಲೇಟ ಕೊಂಡುಕೊಂಡೆ

ನನ್ನ ಪೆನ್ನ ಶಾಹಿ ಖಾಲಿ
ಆಗುವಂತೆ ಕವಿತೆ ಬರೆದು
ಅವಳ ಎದುರಿಗೋಗಿ ನಾನು
ನಾಚಿಕೆಯಿಂದ ನಿಂತುಕೊಂಡೆ

ಅದೇನು ಬಾಯ್ತುಪ್ಪಿ ಅಂದಳೋ
ಬೇಕೆಂದೆ ಅಂದಳೋ

ಒಟ್ಟಿನಲ್ಲಿ ಅಂದಳು
"ಅಣ್ಣಾ" ಎಂದು ಬಿಟ್ಟಳು..॥

ಕೊಚ್ಚಿಕೊಂಡು ಹೋಯ್ತು
ನನ್ನ ಪ್ರಣಯವೆಲ್ಲ ಮೋರಿಯಲ್ಲಿ
ಅವಳಂತ ಕಡುಪಾಪಿ
ಯಾರೂ ಇಲ್ಲ ಊರಿನಲ್ಲಿ

ಚಾಕಲೇಟ ತಿಂದಳು
ಗುಲಾಬಿಯ ಮುಡಿದಳು
ಕವಿತೆಯನ್ನು ಓದಿ
ಚೆನ್ನಾಗಿದೆ ಅಣ್ಣ ಎಂದಳು

ಅಷ್ಟೇ ಅಲ್ಲಿಂದ ಎದ್ದು
ದೂರ–ದೂರ ಬಂದೆ ನಾನು
ಮತ್ತೆ ಪ್ರೀತಿ ಮಾಡದಷ್ಟು
ನರಳಿ–ನರಳಿ ನೊಂದೆ ನಾನು

ಮರಳಿ–ಮರಳಿ ಅವಳ ನೆನೆಪು
ನಿದ್ದೆಯನ್ನು ಕೆಡಿಸುತಿದೆ
ಆದರೇನು ಮಾಡಲಿ
ಅವಳ ಪಾಲಿಗಣ್ಣನಾದೆ ನಾನು...

# ೧೫. ಗೆಳೆಯರು

ಗೆಳೆಯರೆಲ್ಲ ಸಮುದ್ರದ
ಮುತ್ತಿನಂತೆ ಅಮೂಲ್ಯರು
ಒಮ್ಮೆ ಕಳೆದುಕೊಂಡರೆ
ಮತ್ತೆ ಎಂದಿಗೂನು ದೊರಕರು

ಕತ್ತಲಲ್ಲಿ ಹೊಳೆಯುವಂತ
ಚಂದ್ರನಂತೆ ಗೆಳೆತನ
ಸಕ್ಕರೆಯ ಸವಿಯ
ಸಿಹಿಪಾಕದಂತೆ ಗೆಳೆತನ

ನಗುವಿನ ಪಟಾಕಿ ಹಚ್ಚಿ
ಕೂಡಿ ನಗುವ ಸೊಬಗೇ ಗೆಳೆತನ
ನೋವಿನಲ್ಲಿ ಇದ್ದಾಗ ಸಂತೈಸಿ ಮತ್ತೆ ನಗಿಸುವಂತ
ಸದಾಕಾಲ ಸಹಕರಿಸುತ, ಪ್ರೋತ್ಸಾಹಿಸುವಂತ ಗೆಳೆತನ

ಗೆಳೆಯರೆಲ್ಲ ಸಮುದ್ರದ
ಮುತ್ತಿನಂತೆ ಅಮೂಲ್ಯರು
ಒಮ್ಮೆ ಕಳೆದುಕೊಂಡರೆ
ಮತ್ತೆ ಎಂದಿಗೂನು ದೊರಕರು

ಕೇಳಿಲ್ಲ ಯಾವ ಕುಲ
ಮೆಟ್ಟುವುದು ಒಂದೇ ನೆಲ
ಕುಡಿಯುವುದೆಲ್ಲ ಒಂದೇ ಜಲ
ಮತ್ಯಾಕೆ ನಮಗೆ ಜಾತಿ-ಕುಲ

ಒಂದೇ ತಟ್ಟೆಯಲ್ಲಿ ಕುಳಿತು
ಊಟ ಮಾಡುವಾಗ ಸಿಗುವ ಮೋಜು
ಬಂಗಾರದ ತಟ್ಟೆಯಲ್ಲಿ ಉಂಡರೂನು ಸಿಗದು
ಬಂಗಾರವನ್ನೇ ನೀನುಂಡರೂನು ಸಿಗದು

ತುಂಟತನವು ತುಂಬಿದೆ
ಪ್ರೀತಿ ಮಮತೆ ಏರಿದೆ
ಜಗಳ–ಗಿಗಳವಾದರೂ
ಸರಿಹೋಗುವಂತ ಮನಸಿದೆ

ಕಣ್ಣಲ್ಲಿ ಕೋಟಿ ಕನಸಿದೆ
ಸ್ನೇಹ ನಮ್ಮ ಜೊತೆಗಿದೆ
ಗೆಲ್ಲುವುದು ಇರಲಿ,
ಇಲ್ಲಿ ಸೋತರೂನು ಖುಷಿಯಿದೆ

ಗೆಳೆಯರೆಲ್ಲ ಸಮುದ್ರದ
ಮುತ್ತಿನಂತೆ ಅಮೂಲ್ಯರು
ಒಮ್ಮೆ ಕಳೆದುಕೊಂಡರೆ
ಮತ್ತೆ ಎಂದಿಗೂನು ದೊರಕರು...

# ೧೬. ನನ್ನವಳೇ ಸಾಕು

ಇವರೆಲ್ಲ ಯಾಕೆ ನನಗೆ
ನನ್ನವಳೇ ಸಾಕು
ಇವರಂದವ ಸೋಲಿಸಲು
ಆ ಕಿರುನಗೆಯೇ ಸಾಕು

ತಬ್ಬಿ ಮುದ್ದಾಡುವಂತ
ಪೈಕಿ ನನ್ನವಳಲ್ಲ
ಕಣ್ಣಲ್ಲೇ ಚುಂಬಿಸುವ
ಪರಿಯೇ ನನಗೆ ಸಾಕು

ಕೈ ಹಿಡಿದು ಊರೆಲ್ಲ
ಅಲಿಯುವುದು ಬೇಕಿಲ್ಲ
ಕೈಯನ್ನು ಒಮ್ಮೆ ಮುಟ್ಟಿ
ಮಾತಾಡಿದರೆ ಸಾಕು

ಇವರೆಲ್ಲರ ಕೋಗಿಲೆಯ
ಧ್ವನಿ ಕೇಳಲು ಬೋರು ನನಗೆ
ನನ್ನವಳು ಮುದ್ದಾಗಿ,
ರಂಜನ್ ಎನ್ನುವುದೇ ಸಾಕು

ಇವರೇನು ಅಪ್ಸರೆಯರೆ
ಭುವಿಗೆ ಬಂದರೂ ಪರವಾಗಿಲ್ಲ
ಸಿಹಿ ನಗೆಯ, ರತಿ ಕಳೆಯ
ನನ್ನ ಅಪ್ಸರೆಯೇ ಸಾಕು

ಅವಳಂದಕೆ ಇವರ್‍ಯಾರೂ
ಹೋಲಿಕೆಗೆ ಸಾಲರು
ಇವರ ಮುಳುಗಿಸಲು ಅವಳ
ಜೋಡಿ ಕಣ್ಣುಗಳೇ ಸಾಕು

ಇಂದು ನೀನು ನಾಳೆ ಅವನು
ಎನ್ನುವಂತವರ ನಡುವೆ
ಎಂದಿಗೂ ನನ್ನ ಮನದಲಿರುವ
ನನ್ನವಳೇ ಸಾಕು

ದಿನವಿಡೀ ನನ್ನ ಎದುರು ಕೂತು
ನಗುನಗುತ ಮಾತಾಡಿದರೂ
ದಿನಕೊಮ್ಮೆ ಎಲ್ಲೋ ಕೂತು
ನನ್ನ ನೆನೆಯುವವಳೇ ಸಾಕು

ದೂರದಲೆ ಮಾತಾಡದೆ
ಮನಸ್ಸಲ್ಲೆ ಪ್ರೀತಿಸುವ
ಮನದಲ್ಲೇ ಅಡಗಿರುವ
ಅವಳ ಅಕ್ಕರೆಯೇ ಸಾಕು

ಸಾಕು ಸಾಕು
ಅವಳ ಪ್ರೀತಿಯೇ ಸಾಕು
ನನ್ನ ಪ್ರೀತಿಯಲ್ಲಿ ಬೀಳಿಸಿದ
ಅವಳ ಮೌನವೇ ಸಾಕು...

# ೧೭. ಮಾನವರು

ಮೊದಲನೆ ತೂಕದ ಬೊಟ್ಟಿನ ತೂಕವ
ತಿಳಿಸಿದ ಭೂಪ ಯಾರದು ಯಾರು?
ಇರುಳಿನ ಚಂದ್ರ, ಸುಡುವ ಸೂರ್ಯರಿಗೆ
ಹೆಸರುಗಳನ್ನು ಇಟ್ಟವರ್ಯಾರು?

ಉತ್ತರ ದಿಕ್ಕನು ಹುಡುಕಿದ್ಯಾರು?
ಧರಣಿಯ ಗಣಿಯನು ತೆರೆದಿದ್ಯಾರು?
ಪರಿವೇ ಇಲ್ಲದೆ ತಿರುಗುವ ಭೂಮಿಗೆ
ಸಮಯದ ಸರಪಳಿ ಬಿಗಿದಿದ್ಯಾರು?

ಮಾನವರೇ ಸೃಷ್ಟಿ ಕರ್ತರು
ಮಾನವರೇ ಸರ್ವ ಶಕ್ತರು
ಮಾನವರೇ ವಿನಾಶಕಾರರು
ಇದಕ್ಕಿಲ್ಲ ತಂಟೆ ತಕರಾರು ॥

ಮೊದಲ ಬೆಂಕಿಯ ಹಚ್ಚಿದ್ಯಾರು?
ಉರಿವ ದೀಪವ ಬೆಳಗಿದ್ಯಾರು?
ಉಡುವ ಬಟ್ಟೆಯ ನೇಯ್ದದ್ಯಾರು?
ಊರ ಭಾವಿಯ ತೋಡಿದ್ಯಾರು?

ಎಡ ಬಲಗಳ ಬಳಸಿದ್ಯಾರು?
ಎದೆ ಸುಧೆಯನು ಸವಿದದ್ಯಾರು?
ಎಲೆ ಉದುರಿದ ಮರದಡಿ ಕುಂತು
ಮರ್ಮವ್ಯೂಹವನು ಎಣೆದಿದ್ಯಾರು?

ಧರ್ಮ ಗ್ರಂಥಗಳ ಬರೆದಿದ್ಯಾರು?
ಜಾತಿ ಮತಗಳನು ಬೆಳೆಸಿದ್ಯಾರು?
ನೀತಿ ನಿಯಮಗಳ ನೆಟ್ಟಿದ್ಯಾರು?
ಶಾಸ್ತ್ರ ಸೂತ್ರಗಳ ರಚಿಸಿದ್ಯಾರು?

ಸಾವಿರ ಗುಡಿಗಳ ಕಟ್ಟಿದ್ಯಾರು?
ಇಲ್ಲದ ದೇವರ ಇರಿಸಿದ್ಯಾರು?
ಧರ್ಮ ಧರ್ಮಗಳ ದೊಂಬಿ ಏಳಿಸಿ
ಮರೆಯಲಿ ನಿಂತು ನಕ್ಕಿದ್ಯಾರು?

ಮಾನವರೇ ಸೃಷ್ಟಿ ಕರ್ತರು
ಮಾನವರೇ ಸರ್ವ ಶಕ್ತರು
ಮಾನವರೇ ವಿನಾಶಕಾರರು
ಇದಕ್ಕಿಲ್ಲ ತಂಟೆ ತಕರಾರು ॥

ತಂತ್ರಜ್ಞಾನವ ಹಡೆದೋರ್ಯಾರು?
ಯಂತ್ರಜ್ಞಾನವ ಪಡೆದೋರ್ಯಾರು?
ಹಾರುವ ಹದ್ದಿನ ಪರಿಯನು ನೋಡಿ
ಚಂದ್ರನ ಮೇಲಕೆ ಜಿಗಿದೋರ್ಯಾರು?

ಮದ್ದು ಗುಂಡುಗಳ ಮಾಲಿಕರ್ಯಾರು?
ಹೊಡೆದು ಮಕ್ಕಳನು ಕೊಂದವರ್ಯಾರು?
ಜನರಿಗು ಜನರಿಗು ಬೇಲಿಯ ಹಾಕಿ
ದೇಶ ವಿಂಗಡಣೆ ಮಾಡಿದ್ಯಾರು?

ನೀರು, ಆಹಾರ, ಗಾಳಿ ನೀಡುವ
ಪರಿಸರವನ್ನು ಮರೆತವರ್ಯಾರು?
ಮರೆತು ಕಾಣಿಸದ ದೇವರಿಗಾಗಿ
ಪ್ರತಿದಿನ ಕೈಯನು ಮುಗಿವವರ್ಯಾರು?

ಭೂಮಿ ತಾಯಿ ನಮಗೆಲ್ಲಾ ಕೊಟ್ಟರೂ
ಬೇಡದ ಭ್ರಮೆಗೆ ಬಿದ್ದವರ್ಯಾರು?
ಕಂಡ ಸತ್ಯವನು, ಕಂಡಂತೆ ನುಡಿದರೆ
ಜನರೆಲ್ಲಾ ರಂಜನ್–ನ ಹುಚ್ಚ ಎನುವರು

ಹಣ ಮುದ್ರಣ ಮಾಡೋರ್ಯಾರು?
ಹಣೆ ಬರಹವ ಬರೆಯೋರ್ಯಾರು?
ಆಯಸ್ಸನ್ನು ಅಳಿಸೋರ್ಯಾರು?
ಆದಿ ಅಂತ್ಯವನು ಹಾಡೋರ್ಯಾರು?

ಮಾನವರೇ ಸೃಷ್ಟಿ ಕರ್ತರು
ಮಾನವರೇ ಸರ್ವ ಶಕ್ತರು
ಮಾನವರೇ ವಿನಾಶಕಾರರು
ಇದಕ್ಕಿಲ್ಲ ತಂಟೆ ತಕರಾರು.. ॥

# ೧೮. ಹೌದು ಕಪ್ಪು

ಹೌದು ಕಪ್ಪಗಿರುವೆ ಆದ್ರೆ
ಕಳ್ಳ ಅಲ್ಲ ತಿಳಿದುಕೊ
ಎಷ್ಟೇ ಬೆಳ್ಳಗಿದ್ರು ಮುಖವು,
ಮನದ ಕೆಟ್ಟತನವ ಕಳೆದುಕೊ

ಹೌದು ನಿನ್ನ ಅಂದಕೆ
ಕೊಂಚ ಕಳೆದುಹೋದೆ ಸಹಿಸಿಕೊ
ಅಂತರಂಗದಲ್ಲಿ ಇರುವ ನಿನ್ನ
ಕೊಳೆತ ಕಸವ ಕೊಡವಿಕೊ

ಹೌದು ಇಷ್ಟ ಆಯ್ತು ಬಟ್ಟೆ
ಮುಟ್ಟಿಬಿಟ್ಟೆ ತೊಳೆದುಕೊ
ಅಂಗಡಿಯಿಂದ ನೂಕುವಷ್ಟು
ನೀಚನಲ್ಲ ಅರಿತುಕೊ

ಹೌದು ನಿನ್ನ ಹಣವು ಎಲ್ಲೊ
ಬಿದ್ದೋಗಿದೆ ಹುಡುಕಿಕೊ
ನನ್ನ ಕಳ್ಳ ಎಂದರೆ, ಏನು
ಅರ್ಥ ನೀನೆ ಅರಿತುಕೊ

ಹೌದು ನನ್ನ ದೂರುವುದು
ನಿನಗಿಷ್ಟವೆಂದು ಒಪ್ಪಿಕೊ
ನನಗೂ ಒಂದು ಮನವಿದೆ
ನೊಂದು ಅಳುವುದು ನೀ ಅರಿತುಕೊ

ಹೌದು ಬೆಳ್ಳಗಿರೋರ ಮೇಲೆ
ಕಣ್ಣು ಹಾಯಬಹುದು ನೋಡಿಕೊ
ಬಿಳಿ ಚಂದ್ರನಿಗೂ ಬೆಲೆ
ಕಪ್ಪು ಇರುಳಿನಿಂದ ತಿಳಿದುಕೊ

ಹೌದು ವಿಕಾರ ರೂಪಿ
ನನ್ನ ನೋಡಬೇಡ ಸರಿದುಕೊ
ರಂಜನ್ ಮನದ ಆಕಾರ ಕಂಡು
ಬೆರಗಾಗುವೆ ನೀ ಅರಿತುಕೊ

ಹೌದು ನೀನು ಬೆಳ್ಳಿ ಚುಕ್ಕಿ
ಮೇಲೆ ತೇಲುತಿರುವೆ ಅಂದುಕೊ
ಆಯಸ್ಸು ಮುಗಿದ ಮೇಲೆ ಸಿಡಿದು
ಕೆಳಗೆ ಬಿದ್ದು ಸಾಯುವೆ ನೀ ಕೊಚ್ಚಿಕೊ

ಹೌದು ನೀನು ದೂಷಿಸುವುದು
ಕಪ್ಪು ಬಣ್ಣವನ್ನು, ದೂರ ನಿಂತುಕೊ
ಕಪ್ಪೇ ಇಲ್ಲದಿದ್ದರೆ ನೀನು
ಬಿಳಿಯ ನೋಡಲಾರೆ ತಿಳಿದುಕೊ...

# ೧೯. ಪ್ರೀತಿಸಿರಲಿಲ್ಲ

ಅವರಿಗಾಗಿ ನಾನಂತು
ಪ್ರಾಣ ಬಿಡಲು ತಯಾರಿದ್ದೆ
ಆದರೆ ಅವರೆಂದು ನನ್ನನ್ನು
ಪ್ರೀತಿಸಿಯೇ ಇರಲಿಲ್ಲ

ಮುಗಿಬಿದ್ದು ನಾನಾಗೆ ಕರೆಯನ್ನು ಮಾಡುತಿದ್ದೆ
ಅವರು ಕರೆಯಿರಲಿ, ಸಂದೇಶವನೂ ಕಳಿಸುತಿರಲಿಲ್ಲ
ಏಕೆಂದರೆ, ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ
ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ..

ನನ್ನ ಇಡೀ ಸಮಯವನು ಅವರಿಗಾಗಿ ಮೀಸಲಿಟ್ಟಿದ್ದೆ
ಆದರೆ ಅವರು ಒಂದು ನಿಮಿಷವೂ ನನ್ನ ಬಗ್ಗೆ ಯೋಚಿಸಿಯೇ
ಇರಲಿಲ್ಲ
ಏಕೆಂದರೆ, ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ
ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ..

ನನಗಂತೂ ಅವರೇ ಸರ್ವಸ್ವವೂ ಆಗಿದ್ದರು
ಆದರೆ ಅವರಿಗೆ ನಾನೊಬ್ಬ ಮನುಷ್ಯನೂ ಆಗಿರಲಿಲ್ಲ
ಏಕೆಂದರೆ, ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ
ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ..

ಅವರೆದುರು ಬಲು ನಗುತ, ನಗಿಸುತ್ತ ನಾನಿದ್ದೆ
ಆದರೆ ಅವರು ಮನಸಾರೆ ಎಂದೂ ನಕ್ಕಿರಲಿಲ್ಲ
ಏಕೆಂದರೆ, ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ
ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ..

ಅವರಿಗಾಗಿ ನಾನೊಂದು ನಕ್ಷತ್ರವ ತರೋಣವೆಂದಿದ್ದೆ
ಆದರೆ ಬೇರೆ ಯಾರೋ ನಕ್ಷತ್ರಗಳ ಮಾಲೆಯನ್ನೇ ತಂದಿದ್ದರಲ್ಲ
ಅದರಿಂದ, ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ
ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ..

ಅವರನ್ನು ನಾನೆಂದು ಕಾಯಿಸುತ್ತಲೇ ಇರಲಿಲ್ಲ
ಆದರೆ ಅವರು ಯಾರಿಗಾಗೋ ನನ್ನನ್ನು ಗಂಟೆಗಟ್ಟಲೆ
ಕಾಯಿಸುತ್ತಿದ್ದರಲ್ಲ
ಏಕೆಂದರೆ, ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ
ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ..

ನನ್ನ ಮುಂದೆ ಪ್ರೀತಿಸುವಂತೆ ನಗುನಗುತಲೇ ಇದ್ದು
ಯಾರಿಗೋ ಹೋಗಿ ಮುತ್ತನಿಡುತಿದ್ದರಲ್ಲ
ಏಕೆಂದರೆ, ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ
ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ..

ಯಾರಿಗೋ ಒಂದಿರುವೆ ಕಚ್ಚಿದರೆ ಪ್ರಾಣವೇ ಹೋದಂತಾಡುತಿದ್ದರು
ಆದರೆ ಕಣ್ಣೆದುರು ರಂಜನ್ ನ ಪ್ರಾಣ ಹೋದರು ಲೆಕ್ಕಿಸುತ್ತಿರಲಿಲ್ಲ
ಏಕೆಂದರೆ, ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ
ಅವರೆಂದು ನನ್ನನ್ನು ಪ್ರೀತಿಸಿಯೇ ಇರಲಿಲ್ಲ...

# ೨೦. ಕಾಲ್ಗೆಜ್ಜೆಯ ನಾದ

ಜ್ಜಲ್–ಜ್ಜಲ್ ಎಂದು ಏನೊ ದೂರದಿಂದ ಶಬ್ಧ
ದೆವ್ವ ಭೂತ ಪೀಡೆ ಪಿಶಾಚಿಯು ಇರಬಹುದ?
ಇಲ್ಲ ಇಲ್ಲ ರಂಜನ್ ಅದು
ನಿನ್ನೆದೆಯ ದೇವತೆಯ ಕಾಲ್ಗಜ್ಜೆಯ ನಾದ
ಆಹಾ! ಎಷ್ಟು ಇಂಪು ಅವಳ ಕಾಲ್ಗೆಜ್ಜೆಯ ನಾದ..

ಗುಬ್ಬಿ ಪಾರಿವಾಳ, ಎಲ್ಲ ಪಕ್ಷಿಗಳೂ ಅವಳಂದೆ
ಆ ನಾದಕೆ ಮರುಳಾಗಿ ಬಂದು, ಕುಂತು,
ಕೇಳುತಿಹವು, ತಲೆ ದೂಗುತಿಹವು, ನಲಿಯುತಿಹವು,
ನೋಡು–ನೋಡು ರಂಜನ್ ಆ ದೃಶ್ಯದ ಅಂದ
ಆಹಾ! ಎಷ್ಟು ಇಂಪು ಅವಳ ಕಾಲ್ಗೆಜ್ಜೆಯ ನಾದ..

ಊರಿನ ಆಲದಮರ ಅ ನಾದವನು ಕೇಳಿ
ಮೈಮರೆತು ನುಲಿದು–ನುಲಿದು ಬೀಸಿಹುದು ತಂಗಾಳಿ
ಯಾವಾಗಲೂ ನಡೆದಾಡುವ ವರ ಅವಳಿಗಿರಬಾರದ
ಇದ್ದಿದ್ದರೆ ಆಲಿಸಲು ಪ್ರತೀಕ್ಷಣ ರಂಜನ್
ಆಹಾ! ಎಷ್ಟು ಇಂಪು ಅವಳ ಕಾಲ್ಗೆಜ್ಜೆಯ ನಾದ..

ಚಂದ್ರನನ್ನು ಕಡಿದು ಇವಳ ಗೆಜ್ಜೆ ಎಣೆದಿರಬಹುದು
ಮಿನುಗುವಂತ ತಾರೆಗಳ ಆ ಗೆಜ್ಜೆ
ಮೇಲಿಟ್ಟಿರಬಹುದು
ರಂಜನ್ ನಿನ್ನ ಕಣ್ಣೇ ಆ ಹೊಳಪಿಗೆ ಮಂಪಾಗಿದೆ
ಗೆಜ್ಜೆ ಕಟ್ಟಿ ಅವಳು ಊರುತಿದ್ದರೆ ಪಾದ
ಆಹಾ! ಎಷ್ಟು ಇಂಪು ಅವಳ ಕಾಲ್ಗೆಜ್ಜೆಯ ನಾದ..

ವೀಣೆ ತಬಲ ಕೊಳಲಿಗಿಂತ, ಮದುವೆ ಮನೆ
ತುತ್ತೂರಿಗಿಂತ ಆನಂದಮಯ ಆ ನಾದ
ಆ ನಾದವ ಕೇಳುತ, ಪದೇಪದೇ ನೆನೆಯುತ
ಮೈಮೇಲೆ ಪ್ರಜ್ಞೆ ಇಲ್ಲದಂತೆ ರಂಜನ್ ಪೂರಾ ಮರುಳಾದ
ಆಹಾ! ಎಷ್ಟು ಇಂಪು ಅವಳ ಕಾಲ್ಗೆಜ್ಜೆಯ ನಾದ..

# ೨೧. ಸಂದಾಗಿರು

ಕಲ್ನಂಗ್ ಇದ್ದಿದ್ ನನ್ ಹೃದ್ಯಾನ
ಮಂಜ್ನಂಗ್ ಕರ್‍ಗುಸ್ದೆ ನೀನು
ಆ ಕರ್‍ಗಿರೋ ಪ್ರೀತಿ ನೀರ್‍ನ
ಬಾಯ್ಗ್ ಹಾಕಂಡ್ ಮುಕ್ಳುಸುಗ್ದ್ ವೊಂಟೋದೆ ನೀನು

ವೊಂಟೋಗ್ ಬೇಕಾದ್ರೆ ಒಂದ್‌ಕಿತನಾರ
ಹಿಂದೆ ತಿರುಗ್ ನೋಡ್ದೇನಮಿ ನೀನು
ಒಂದ್ ಕಿತ ತಿರ್‍ಗ್ ನೋಡ್ಬೇಕಾಗಿತ್ತು
ಗೊತ್ತಾಗಿರೋದು ಈ ರಂಜನ್‌ಗಾದ್ ನೋವೇನು

ನೋವಾದೆಟ್ಗೆ ಕೆರೆನೋ ಬಾವಿನೋ
ನೋಡ್ಕಳ್ಳಿಲ್ಲ ನಾನು
ಇಲ್ಲ, ಏಟ್‌ತಿಂದ್ ನಾಯಂಗೆ
ಮೂಲೇಲ್ ಕುಂತಳ್ಳಿಲ್ಲ ನಾನು

ನನ್ ಮುತ್ನಂತಾ ಗೆಳ್ಯರ್ ಕರ್‍ಕಂಡು
ಟಾಕೀಸ್ನಾಗ್ ಸಿನ್ಮಾಗೋದೆ ನಾನು
ಸಿನ್ಮಾ ನೋಡ್ಕಂಡು, ಬೀದಿ ಸುತ್ಕಂಡು,
ಮನೆಗ್ ಬಂದು ಮಕಡಾ ಮನಿಕಂಡೆ ನಾನು

ಮನೆಗ್ ಬಂದ್ ಮನಿಕಂಡೆಟ್ಗೆ
ನಿನ್ನುನ್ ಮರ್‍ತ್ತೋಗ್ಬುಟೆ ಅಂದ್ಕಂಡೇನು?
ಇಲ್ಲ–ಇಲ್ಲ, ನಿನ್ನುನ್ ಇನ್ನೂ ನನ್ ಮನ್ಸೊಳ್ಗಿರೊ
ಮಹಲ್ಲೊಳ್ಗೆ ಕಂಬ್ಳಿ ವೊದ್ಸಿ ಮಲುಗ್ಸಿವ್ನಿ ನಾನು

ಆದ್ರೇನ್ಮಾಡ್ಲಿ ನೀನ್ ಕೆಡ್ವೋಗಿರೋ
ಈ ಮಹ್ಲೆಲ್ ನಿನ್ ಮ್ಯಾಲ್ ಬೀಳ್ತದೋ ಅಂತ
ಈ ಮನ್ಸ್ನ ಬಿಗಿ ಹಿಡ್ಕಂಡ್ ಕುಂತಿವ್ನಿ ನಾನು
ಈಗ ನೀನೇ ಯೋಳು, ನಿನ್ನ ಅಸ್ಟ್ ಸುಲುಭ್ವಾಗ್ ಮರ್ತ್ಬುಟನೇನು?

ನೀನೇನೋ ನನ್ನುನ್ ಬುಟ್ ವೊಂಟೋಗ್ಬುಟಿರುವೆ
ಆದ್ರೆ ನಿನ್ ನೆನುಪ್‌ಗಳಿನ್ನೂ ನನ್ ಜೊತ್ಗೇ ಅವೆ
ನನ್ ನೆನುಪ್‌ಗಳ್ನೇನೋ ನಿನ್ ಪೋನಿಂದ ಅಳ್ಸ್‌ಬುಟಿರುವೆ
ಆದ್ರೆ ನನ್ ಜೊತೆ ಕಳ್ದಿರೊ ಕ್ಷಣಗಳ್ನ ನೀನ್ ಮರ್ತ್ಬುಟಿಯೇನೆ ಚೆಲ್ವೆ?

ಚಿಟ್ಟೆಯಂಗೆ ನನ್ ಜೊತ್ಗೆ ಊರೆಲ್ಲಾ ಅಲಿತಿದ್ದಲಮಿ
ಆದ್ರೆ ಇವತ್ ನೀನಿಲ್ದೆ ಊರೆಲ್ಲಾ ಮಶಾಣ್ದಂಗ್ ಕಾಣ್ತಾಅದೆ ಕಣಮಿ
ಇಂತ ಮಶಾಣ್ದಾಗೆ ನನ್ನ ಬಿಸಾಡಿ ನೀನದೆಂಗ್ ಖುಸ್ಯಾಗ್ ಇದಿಯಮಿ?
ನನ್ನೀ ಎಳೆ ಹೃದ್ಯ ವೊಡ್ದಾಕಿದ್ ನಿನ್ ಹೃದ್ಯ ಕಲ್ಲೇನಮಿ?

ನನ್ನೀ ವೊಡ್ದೋಗಿರೋ ಹೃದ್ಯುವ
ಅಂಟ್ಸಕೆ ಅಂತ ಯಾರ್‍ಯಾರೊ ಗಮ್ ತಗಂಡ್ ಬರ್ತವ್ರೆ
ಆದ್ರೆ ಅವ್ರ್ ಹಾಕಿರೊ ಗಮ್‌ಗೆ
ನನ್ ಹೃದ್ಯ ರಿದಮ್ ಹಾಕಕಿಲ

ಯಾಕಂದ್ರೆ ಆ ರಿದಮ್‌ಗೆ ಹೆಜ್ಜೆ ಹಾಕೊ
ನಿನ್ ಹೃದ್ಯ ನನ್ಮುಂದಿಲ್ಲ
ನಿನ್ನುನ್ ಬುಟ್ಟು ಈ ಹೃದ್ಯ
ಬೇರೆ ಯಾರ್ನೂ ಒಪ್ಪಾಕಿಲ

ಒಪ್ಕಳ್ದೆ ಇರೊ ಈ ಹೃದ್ಯುವ
ಗುಜ್ರಿ ಅಂಗ್ಡಿಗ್ ಹಾಕನ ಅಂತಂದ್ರೆ

ವೊಡ್ದೋಗಿರೊ ಹೃದ್ಯುವ ಅಲ್ಲೂ ತಕಳಾಕಿಲ
ಅದ್ಕೆ ಈ ಹೃದ್ಯುವ ಹೊಲಿಯನ ಅಂತಂದ್ರೆ
ನಂತಾವ್ ಯಾವ್ದೂ ದಾರಾನೇ ಇಲ್ಲ

ದಾರಾನೂ ಇಲ್ಲ ದಾರೀನೂ ಇಲ್ಲ
ನನ್ನೀ ವೊಡ್ದ್ ಹೃದ್ಯುವ ಸರಿಮಾಡಕೆ
ನೀನೂ ಇಲ್ಲ ನಿನ್ ಕಿವಿಯೂ ಇಲ್ಲ
ನನ್ನೀ ನೋವ ಹೇಳ್ಕಳಕೆ

ಪರ್ವಾಕಿಲ್ಲ ಬುಡು ಈ ನೋವ
ಬೇವುನ್ ಸೊಪ್ಪಂಗ್ ಅಗ್ದು ನುಂಕತೀನಿ
ಆದ್ರೆ ಅಗಿಯಕ್ಕೆ ಕಹಿ ಅಂತೇಳಿ
ಬಾಯಿಂದ ಕೆಳಕ್ ಉಗ್ಯಾಕಿಲ್ಲ

ಬಾಳಲ್ ಕಳ್ಯೊ ಕೊನೇ ಕ್ಷಣ್ದೊರ್ಗು
ನಿನ್ ನೆನುಪ್ನ ಬೀಗ ಹಾಕಿ
ನನ್ ಮನ್ಸೊಳಗೇ ಹೂತಾಕಿ
ಆವಾಗವಾಗ ತೆಗ್ದು ನೋಡ್ತಿರ್ತೀನಿ

ನೋಡೊ ಪ್ರತಿ ಸಾರೀನೂ
ನಿನ್ನ ನೆನುಸ್ಕಂಡು ಬಿಕ್ಕಿ ಬಿಕ್ಕಿ ಅಳ್ತಿರ್ತೀನಿ
ಅಳೋ ಪ್ರತೀ ಹನಿ ಕಣ್ಣೀರ್ನಾಗು
ನನ್ ಮನ್ಸ್ನಾಗ್ ಇರೋ ದುಃಖ್ವ ದುಮ್ಕುಸ್ತೀನೆ ವೊರ್ತು

ನಿನ್ ಜೊತೇಗಿದ್ದಿದ್ ನೆನುಪ್ಗಳ್ನ
ಜಾರಕ್ ಬುಡಾಕಿಲ್ಲ
ಯಾಕಂದ್ರೆ ಆ ನೆನುಪ್ಗಳೇ ಕಣಮಿ
ನಂತಾವ್ ಇರೋ ಅಮೂಲ್ಯವಾದ ಆಸ್ತಿ

ಇಂತಾ ಆಸ್ತಿನ ಯಾವ್ ಬೇಕೂಫ್ನನ್ಮಗ ಕಳ್ಕತನೇಳು
ಕಳ್ಕಬೇಕು ಅಂತ್ಕಂಡ್ರು
ಕಳ್ಕಳಕಾದದ ನೀನೆ ಹೇಳು
ಕಳ್ಕಳ್ದಂಗೆ ಈ ನೆನುಪ್ಗಳ್ನ

ಮತ್ತೆ ನೆನಿತ ನೆನಿತ, ನೆನ್ದು
ಕೊರುಗ್ತ ಕೊರುಗ್ತ, ಕೊರ್ಗಿ
ನರುಳ್ತ ನರುಳ್ತ, ನರ್ಳಿ
ಸೋಕುದ್ ಸಮುದ್ರುದಾಗ್ ಈಜಾಡ್ಕಂಡು

ನಾನೆಂಗೋ ಹಾಳಾಗ್ ವ್ಹೋಯ್ತಿನಿ
ಆದ್ರೆ ನನ್ನ ಹಾಳ್ಮಾಡ್ಬುಟು
ಯಾವನ್ ಜೊತೆಗಾರು ಸಂದಾಗಿರಮಿ ನೀನು
ನನ್ನ ಬುಟ್ಟು ಯಾವನ್ ಜೊತೆಗಾರು
ಸಂದಾಗಿರಮಿ ನೀನು ಸಂದಾಗಿರು...

# ೨೨. ಎಣಿಸಲಾಗದು

ಅಮವಾಸೆ ಕತ್ತಲೆಯ ಕರಾಳ ರಾತ್ರಿಯದು
ಹೇಳಿದೆ ನೀನಂದು, ನಮ್ಮ ಪ್ರೀತಿ ಮುಂದೆ ಸಾಗದು
ರಂಜನ್ ನಿನ್ನಲ್ಲಿ ನನಗಾಗಿ ಪ್ರೀತಿಯೇ ಇಲ್ಲ
ನಿಜವಾಗಿಯೂ ನೀ ನನ್ನ ಪ್ರೀತಿಸುತಲೇ ಇಲ್ಲ
ನಿನ್ನಂಥವನನ್ನು ನಾನು ಪ್ರೀತಿಸುವುದಿಲ್ಲ ಎಂದೆಯಲ್ಲ

ನಕ್ಷತ್ರಗಳನ್ನಾದರೂ ನೀ ಎಣಿಸಬಹುದು ಹುಡುಗಿ
ಆದರೆ ನಿನ್ನ ಮೇಲಿರುವ ನನ್ನ ಪ್ರೀತಿ ಎಣಿಸಲಾಗದು..॥

ನಿನ್ನ ಸಂದೇಶಕೆ ಉತ್ತರ ಕೊಡುವುದು ತಡವಾಯಿತು
ನಿನಗೆ ಕರೆ ಮಾಡುವುದು ಮರೆತೋಯಿತು
ನೀ ಕರೆ ಮಾಡಿದಾಗ ಆಚೆ ಅಲೆದಾಡುತಿದ್ದೆ
ಅಷ್ಟಕ್ಕೇ ನಿನ್ನ ಮೇಲೆ ಪ್ರೀತಿ ಇಲ್ಲ ಎಂದಲ್ಲ
ಅಲೆದಾಡುವಾಗಲೂ ನಿನ್ನ ನೆನಪು ನನ್ನ ಕಾಡುತಿತ್ತು

ನಕ್ಷತ್ರಗಳನ್ನಾದರೂ ನೀ ಎಣಿಸಬಹುದು ಹುಡುಗಿ
ಆದರೆ ನಿನ್ನ ಮೇಲಿರುವ ನನ್ನ ಪ್ರೀತಿ ಎಣಿಸಲಾಗದು..॥

ಬಸ್ಸಿನಲಿ ಯಾವುದೋ ಹುಡುಗಿ ಪಕ್ಕ ನಾ ಕುಳಿತಿದ್ದೆ
ಅವಳೊಂದಿಗೆ ನಗುನಗುತ ಸಲಿಗೆಯಿಂದ ಮಾತನಾಡುತಿದ್ದೆ
ಅವಳೇ ನಿನ್ನ ಸವತಿ ಎಂದು ತಪ್ಪು ತಿಳಿದುಕೊಂಡೆ ನೀನು
ಆದರೆ ಅವಳು ನನ್ನ ತಂಗಿ ಎಂದು ಹೇಗೆ ಹೇಳಲಿ ನಾನು

ನಕ್ಷತ್ರಗಳನ್ನಾದರೂ ನೀ ಎಣಿಸಬಹುದು ಹುಡುಗಿ
ಆದರೆ ನಿನ್ನ ಮೇಲಿರುವ ನನ್ನ ಪ್ರೀತಿ ಎಣಿಸಲಾಗದು..॥

ನೀನೂ ಯಾರ ಜೊತೆಗೋ ಕೈಕೈಹಿಡಿದು ಮಾತಾಡುತಿದ್ದೆ
ಅಣ್ಣನೋ–ತಮ್ಮನೋ ಗೆಳೆಯನಿರಬಹುದೆಂದು ನಾ ಸುಮ್ಮನಾದೆನಲ್ಲ
ನನ್ನನ್ನು ಕೊಂಚ ಪೋಲಿ ಎಂದರೂ ನಾ ಸಹಿಸುತ್ತಿದ್ದೆ
ಆದರೆ ನನ್ನಲ್ಲಿ ಪ್ರೇಮವೇ ಇಲ್ಲ ಎಂದೆಯಲ್ಲ

ನಕ್ಷತ್ರಗಳನ್ನಾದರೂ ನೀ ಎಣಿಸಬಹುದು ಹುಡುಗಿ
ಆದರೆ ನಿನ್ನ ಮೇಲಿರುವ ನನ್ನ ಪ್ರೀತಿ ಎಣಿಸಲಾಗದು..॥

ಆ ಅಮವಾಸೆಯ ರಾತ್ರಿಯಲಿ ನೀ ನನ್ನ ಬೇಡವೆಂದೆ
ನೀನಗೇನು ಗೊತ್ತು ಆ ಕ್ಷಣ ನಾನೆಷ್ಟು ನೊಂದೆ
ಮಳೆಯೂ ಸುರಿಯಲಿಲ್ಲ ಅಂದು
ನನ್ನ ಕಂಬನಿಗಳ ಮರೆಮಾಚಲು
ಚಂದ್ರನೂ ಇರಲಿಲ್ಲ ರಂಜನ್ ನೋವನ್ನು ತೋಡಿಕೊಳ್ಳಲು
ಕತ್ತರಿಸಿದ ತಲೆಯನ್ನು ಮತ್ತೆ ಸೇರಿಸಬಹುದೇನೊ
ಆದರೆ ನೀ ಮಾಡಿದ ಗಾಯವನ್ನು ವಾಸಿಮಾಡಲಾಗದು

ನಕ್ಷತ್ರಗಳನ್ನಾದರೂ ನೀ ಎಣಿಸಬಹುದು ಹುಡುಗಿ
ಆದರೆ ನಿನ್ನ ಮೇಲಿರುವ ನನ್ನ ಪ್ರೀತಿ ಎಣಿಸಲಾಗದು...॥

# ೨೩. ಮರೆಯದೆ ಮನಸಿನಲಿ ಪ್ರೀತಿಯನು ಮಾಡೋಣ

ಹೊಡೆದುಹೋದ ಚಂದ್ರನ ತುಂಡು ಕೂಡ
ತಿಂಗಳಿಗೊಮ್ಮೆ ಒಂದಾಗುವುದು
ತೊಡೆದುಹೋದ ತೊರೆಯೂ ಕೂಡ
ಕೊನೆಗೊಂದು ಕಡೆ ಕೂಡುವುದು

ಹರಿದು ಹೋದ ಹಾಳೆಯನ್ನೂ
ಹೇಗೋ ಮಾಡಿ ಅಂಟಿಸಬಹುದು
ಆದರೆ ನಮ್ಮಿಬ್ಬರ ಪ್ರೀತಿಯನ್ನು
ಏನು ಮಾಡಿದರೂ ಸೇರಿಸಲಾಗದು

ನಾನು ನನ್ನ ಪ್ರೀತಿಯನ್ನು ಹೇಳಿಕೊಂಡಿಲ್ಲ ನಿಜ
ಆದರೆ ನಿನಗೂ ನನ್ನ ಮೇಲೆ ಪ್ರೀತಿಯಿತ್ತೆಂಬುದೂ ನಿಜ
ನಾವಿಬ್ಬರು ಪ್ರೀತಿಯನ್ನು ಸಮರ್ಥಿಸಲು ಅಂಜಿದ್ದೂ ನಿಜ
ಅಂಜಿ ಪ್ರೀತಿಯನು ಪಡೆಯದೆ ದೂರವಾದದ್ದೂ ನಿಜ

ನಿಜವಾದ ಪ್ರೀತಿಯಿದ್ದರೂ ಪ್ರೇಮಿಗಳಲ್ಲ ನಾವು
ಶುದ್ಧಮನಸ್ಸಿನಿಂದ ಪ್ರೀತಿಸಿದರೂ ಒಂದಾಗಲಿಲ್ಲ ನಾವು
ಸಮಯಕ್ಕಾಗಿ ಕಾಯುತ್ತ, ಸಮಾಜಕ್ಕೆ ಹೆದುರುತ್ತ
ಕೊನೆಗೆ ಇಬ್ಬರೂ ಕಳೆದೇ ಹೋದೆವು

ಆದರೆ ಕಳೆದೋದ ಜಾಗದಲ್ಲೂ
ಕಳೆದ ನೆನಪುಗಳನ್ನು ನೆನೆಯುತಿಹೆವು
ನೆನಪಿನಲಿ ಒಂದಾಗಿ ನಿಜವಾದ ಪ್ರೀತಿ ಆರಂಭಿಸಿ
ಮೌನವಾಗಿ ಪ್ರೀತಿಯ ಫಲವ ಸವಿಯುತಿಹೆವು

ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ನೀನು
ರೋಮಾಂಚನದಿ ನಾಚಿ ಥಳಮಳಿಸುತಿದ್ದೆ ನಾನು
ರೆಪ್ಪೆ ಮರೆಯಿಂದ ನನ್ನನ್ನು ನೋಡುತ್ತ
ಗುಟ್ಟಾಗಿ ಮನಸಲ್ಲೇ ನಗುತಿದ್ದೆ ನೀನು

ನಿನ್ನನ್ನು ನೋಡುತ್ತ
ಜಗವನ್ನು ಮರೆಯುತ್ತ
ಪ್ರೇಮದ ಅಮಲಿನಲಿ
ಮುಳುಗಿದೆನು ನಾನು

ಎಲ್ಲಾದರು ಎದುರಾದರೆ
ಹಣೆಯೆರಡೂ ತಾಕಿದರೆ
ಒಂದು ಕ್ಷಣ ಸ್ತಬ್ಧರಾಗಿ
ನಗುತ ನಾಚಿ ಹೋಗುತಿದ್ದೆವು

ಅರಿಯದೇ ಏನಾದರು
ಕಿರುಬೆರುಳು ಮುಟ್ಟಿದರೆ
ಮುದದಿಂದ ಮೈಮರೆತು
ಮನಸಿನಲೆ ಮಾಂಗಲ್ಯ ಹಾಡುತಿದ್ದೆವು

ನಮ್ಮಿಬ್ಬಿರ ಹೆಸರನ್ನು
ಯಾರಾದರು ಜೊತೆ ಮಾಡಿದರೆ
ಒಂದು ಸಲ ಅವರೆದುರು ರೇಗುತಿದ್ದೆವು
ಆದರೆ ಮನಸಿನಲಿ ಖುಷಿಯಿಂದ ಜಿಗಿಯುತಿದ್ದೆವು

ಮಾತಾಡುವಾಗ ಪ್ರೀತಿಯ ಸುಳಿವನ್ನು ಬಿಚ್ಚುತ್ತ
ಸುಳಿವುಗಳ ಸೆಳೆತದಲಿ ಸುಳಿದಾಡುತಿದ್ದೆವು
ನಮ್ಮ ಸನಿಹಕ್ಕೆ ಬೇರೆ ಯಾರಾದರು ಬಂದರೆ
ಕೋಪದಿಂದಿಬ್ಬರೂ ಮುನಿಯುತಿದ್ದೆವು

ಮುನಿಸಿನಲು ಮನದಲ್ಲಿ ಆಸೆಗಳ ಬೆಳೆ ಚೆಲ್ಲಿ
ಕೆಸರೆಲ್ಲ ತಿಳಿಯಾಗಲು ಕಾಯುತಿದ್ದೆವು
ತಿಳಿನೀರಂತ ಪ್ರೀತಿಯನು ಕೆದಕುವಾ ಶನಿಗಳನು
ಮನಸಾರೆ ಇಬ್ಬರೂ ಶಪಿಸುತಿದ್ದೆವು

ಕಣ್ಣಿನಲೆ ಉತ್ತರವ ರವಾನಿಸುತ
ಮಾತಿನಲೆ ಮನಸನ್ನು ಆಕ್ರಮಿಸುತ
ಖುಷಿಯಿಂದ ಕಾಲವನು ಕಳೆಯುತ್ತ
ಆ ಸುಂದರ ದಿನಗಳೆಲ್ಲ ಕಳೆದೇ ಹೋದವು

ನಿನ್ನನ್ನು ನೋಡಿದ ಕೊನೆ ದಿನವ ನೆನೆದು
ನನ್ನ ಕಣ್ಣುಗಳು ಕಣ್ಣೀರಿಡುತ್ತ
ನಿನ್ನ ನೆನಪಿನಲಿ ನೆನೆಸಿ ನೆನೆಸಿ
ನನ್ನನ್ನು ಒದ್ದೆ ಮಾಡಿರುವವು

ಒದ್ದೆಯಾದ ರಂಜನ್ ಜೀವವು
ಒಂದು ಕ್ಷಣವೂ ನಿದ್ದೆ ಮಾಡದೆ
ನಿನ್ನ ನೆರಳನು ಹಂಬಲಿಸುತ
ಹಗಲೂ ಇರುಳೂ ಗೋಳಾಡುತಿರುವುದು

ನಿನ್ನ ನೆನಪುಗಳ ಮರವನ್ನು
ಹಠವಾದಿ ಈ ತಲೆಯು
ಮನಸಿನಲಿ ಮೊಳೆಯೊಡೆದು
ಕೀಳಲಾಗದಂತೆ ಗಟ್ಟಿಯಾಗಿ ನೆಟ್ಟಿರುವುದು

ಆದರೆ ಆ ನೆನಪಿನಲೆ ಎಷ್ಟೆಂದು ಬಾಳಲಿ
ನೀನಿಲ್ಲದೆ ಈ ಮನವು
ಮನೆಯಿಲ್ಲದ ಮಗುವಂತೆ
ಗಳಗಳನೆ, ಬಿಕ್ಕಿ–ಬಿಕ್ಕಿ ಅಳುತಿಹುದು

ಅತ್ತರೂ ನೀ ಸಿಗುತಿಲ್ಲ ನನ್ನ ಬಳಿ ಬರುತಿಲ್ಲ
ಊರೆಲ್ಲಾ ಹುಡುಕಿದರು ನಿನ್ನ ಗೆಜ್ಜೆಯ ಸದ್ದಿಲ್ಲ
ನೀನೆಲ್ಲೋ ನಾನೆಲ್ಲೋ ಆದರೂ ಮರೆತಿಲ್ಲ
ಮರೆಯಲು ನಮ್ಮದು ಚೆಲ್ಲಾಟದ ಪ್ರೀತಿಯಲ್ಲ

ದೂರದಿಂದಲೇ ಕ್ಷೇಮವನು ಬಯಸೋಣ
ಅನುದಿನವು ಅನುರಾಗದ ಸಂದೇಶವ ಕಳಿಸೋಣ
ಇಬ್ಬರ ಗೆಲುವಿಗೂ ಪ್ರತಿಕ್ಷಣವು ಹರಸೋಣ
ಸತ್ತರೆ ಇಬ್ಬರೂ ಚುಕ್ಕಿಯಾಗಿ ನೆಲೆಸೋಣ

ಮರೆಯದೆ ಮನಸಿನಲೆ ಪ್ರೀತಿಯನು ಮಾಡೋಣ
ಮರೆಯದೆ ಮನಸಿನಲೆ ಪ್ರೀತಿಯನು ಮಾಡೋಣ
ಒಂದಲ್ಲ ಒಂದು ದಿನ ಸಿಗುವವೆಂದು
ಮರೆಯದೆ ಮನಸಿನಲೆ ಪ್ರೀತಿಯನು ಮಾಡೋಣ...

# ೨೪. ಅವನು - ನೀನು

ಚಂದ್ರನನ್ನು ತಂದು ನಿನ್ನ
ಮಡಿಲಿನಲ್ಲಿ ಇಡುತಿದ್ದೆ
ಕೋಹಿನೂರು ವಜ್ರದ
ಉಂಗುರ ನಿನಗೆ ತೊಡಿಸುತಿದ್ದೆ

ಪಾರಿಜಾತದೂವತಂದು ನಿನ್ನ
ಮುಡಿಗೆ ನಾನು ಮುಡಿಸುತಿದ್ದೆ
ಬಂಗಾರದ ಹೊದಿಕೆ ನೇಯ್ದು
ನಿನ್ನ ಮೈಗೆ ನಾನು ಹೊದಿಸುತಿದ್ದೆ

ಸಾವಿರಾರು ಕವಿತೆಗಳ
ಬರೆದು ನಿನ್ನ ಹೊಗಳುತಿದ್ದೆ
ಅಂದವಾದ ನಿನ್ನ ಎಲ್ಲ
ಕನಸಿನಲ್ಲೂ ಬರುತಿದ್ದೆ

ಆದರೆ,

ನಿನ್ನಂತಹ ನೀಯತ್ತಿರದ
ಗುಳ್ಳೆನರಿ ನನಗೆ ಬೇಕಿಲ್ಲ
ನನ್ನ ಪ್ರೀತಿ ಕೊಂದ ಕ್ರೂರಿ
ನಿನ್ನ ಕರ್ಮ ನಿನ್ನ ಉಳಿಸಲ್ಲ॥

ಚಂದ್ರನನ್ನು ತಂದಿಡಲು,
ನಿನ್ನ ಮಡಿಲಲಿ ಅವ ಮಲಗಿದ್ದ.
ನಾ ಉಂಗುರವ ತೊಡಿಸೋ ಮೊದಲು,
ಅವ ಕಾಲುಂಗುರವ ತೊಡಿಸಿದ್ದ.

ನಿನ್ನ ಮುಡಿಯ ತುಂಬ ಅವ
ವಿಷದ ಪುಷ್ಪಗಳನು ಮುಡಿಸಿದ್ದ.
ಚಳಿ ಎಲ್ಲಿ ನಿನಗೆ? ಹೊದಿಕೆಯಾಗಿ
ಆತ ನಿನ್ನ ತಬ್ಬಿಕೊಂಡು ಕುಳಿತಿದ್ದ.

ರಂಜನ್ ಕವಿತೆಗಳ ಕೇಳಲು ನಿನಗೆ
ಪುರುಸೊತ್ತಾದರೂ ಎಲ್ಲಿದೆ?
ಹಗಲಿರುಳೂ ಆತ ನಿನ್ನ
ಕಿವಿಯೋಲೆಯಾಗಿ ಹಾಡುತಿದ್ದ.

ನಿನ್ನ ಕನಸಿನಲ್ಲಿ ಬರಲು ನನಗೆ
ದಾರಿಯೇ ಉಳಿದಿರಲಿಲ್ಲ,
ದ್ವಾರಗಳನು ಮುಚ್ಚಿ ಅವನು
ನಿನ್ನ ಜೊತೆಗೆ ಆಟ ಆಡುತಿದ್ದ.

ನಿನ್ನಂತಹ ನೀಯತ್ತಿರದ
ಗುಳ್ಳೆನರಿ ನನಗೆ ಬೇಕಿಲ್ಲ
ನನ್ನ ಪ್ರೀತಿ ಕೊಂದ ಕ್ರೂರಿ
ನಿನ್ನ ಕರ್ಮ ನಿನ್ನ ಉಳಿಸಲ್ಲ॥

ಅವನನ್ನೇನು ಕೇಳಲಿ?
ಅವನಿಗೇನು ಹೇಳಲಿ?

ಅವನ ಮನೆಯ ಮುಂದೆ ನಿಂತು
ಜಗಳವೇಗೆ ಮಾಡಲಿ?

ಗಾಳಿಯಲ್ಲಿ ಹಾರಿ ಹತ್ತಿ
ಬೆಂಕಿಯಲ್ಲಿ ಬಿದ್ದಂತೆ
ನೀನಾಗೆ ಹೋಗಿ ಅವನ
ತೋಳಿನಲ್ಲಿ ಬಿದ್ದಿರುವೆ.

ಓ ಸುಂದರ ಬಾಲೆ,
ಮತ್ತೆ ಬರಬೇಡ ನಾಳೆ
ನಿನ್ನಿಂದ ನಾಶವಾಗಿಹೋಯ್ತು
ನನ್ನ ಹದಿಹರೆಯದ ಬಾಳೆ

ನನ್ನ ಪ್ರೇಮವನ್ನು ಪಡೆಯುವಂತ
ಯೋಗ ನಿನಗಿಲ್ಲ ಕೇಳೆ
ನಮ್ಮೂರಲ್ಲಿ ನನಗಾಗಿ ನಿಂತಿದೆ
ನೂರಾರು ಹುಡುಗಿಯರ ಸಾಲೆ

ಹಾಗಾಗಿ,

ನಿನ್ನಂತಹ ನೀಯತ್ತಿರದ
ಗುಳ್ಳೆನರಿ ನನಗೆ ಬೇಕಿಲ್ಲ
ನನ್ನ ಪ್ರೀತಿ ಕೊಂದ ಕ್ರೂರಿ
ನಿನ್ನ ಕರ್ಮ ನಿನ್ನ ಉಳಿಸಲ್ಲ!!..

# ೨೫. ಹೂಮಳೆ

ನೆನಪಿನಂಗಳದಿ ನರ್ತಿಸೊ ನವಿಲೆ
ನಿಶೆಯಲಿ ನಶೆಯನು ಏರಿಸೊ ನೆರಳೆ
ನಳಿನಿಯ ಬಿಂಕವ ನಾಚಿಸೊ ಮರುಳೆ
ನೀ ನಕ್ಕರೆ ಹೂ ಮಳೆ ಹೂ ಮಳೆ

ಚುಕ್ಕಿ ಸ್ವರೂಪದ ಮಿನುಗುವ ಕಂಗಳೆ
ಕಿಲ ಕಿಲ ಕಿಸಿಯುವ ಚಂದದ ಕೈ ಬಳೆ
ದುಂಡು ಮಲ್ಲಿಗೆಯ ಕೆನ್ನೆಯ ಕೋಮಲೆ
ನೀ ನಕ್ಕರೆ ಹೂ ಮಳೆ ಹೂ ಮಳೆ

ಬೆಲ್ಲದ ಪಾಕದ ಕಂಠದ ಕೋಗಿಲೆ
ಘಮ ಘಮ ಕೇಶದ ಕಿನ್ನರಿ ನೈದಿಲೆ
ಗುಲಾಬಿ ತುಟಿಗಳ ತುಪ್ಪದ ತಿರುಳೆ
ನೀ ನಕ್ಕರೆ ಹೂ ಮಳೆ ಹೂ ಮಳೆ

ಒಲವನು ಉಗುಳಲು ವಲ್ಲದ ಚಂಚಲೆ
ಮುದ್ದಿನ ಮೂಗಿಗೆ ಮೂಗುತಿ ಆಗಲೆ
ಗಂಧದ ಹೂವಿನ ಸುಗಂಧ ನಿನ್ನೊಳೆ
ನೀ ನಕ್ಕರೆ ಹೂ ಮಳೆ ಹೂ ಮಳೆ

ಅನುರಾಗವು ಮಾಗದ ಕಾಯಿಲೆ
ತುಟಿಯಂಚಿನ ಸುಧೆಯನು ಸವಿಯಲೆ
ರಂಜನ್ ಸಖಿ ಬೆಂದಿದೆ ಈ ಇಳೆ
ನೀ ನಕ್ಕರೆ ಹೂ ಮಳೆ ಹೂ ಮಳೆ..

# ೨೬. ಕ್ರೂರಿ

"ನೀ ಬೇಡ" ಎಂದು ಹೇಳಲೇನೆ
ಮತ್ತೆ ಕರೆ ಮಾಡಿದೆಯಾ ಕ್ರೂರಿ
ನಿನ್ನ ನೆನೆದು ನೆನೆದು
ಗೊತ್ತೇಯಿಲ್ಲ ಅತ್ತೆ ಎಂದು ಎಷ್ಟು ಸಾರಿ

ನಿನ್ನ ದೇಹ ದೂರ ಇದ್ದರೂ
ನಿನ್ನ ಜೀವ ನನ್ನ ಜೊತೆಗೇ ಇತ್ತು
ನಿನ್ನನ್ನೇ ನೆನೆಯುತಿದ್ದೆ
ಹಗಲು ರಾತ್ರಿ ಎಲ್ಲ ಹೊತ್ತು

ನಿನ್ನಲೇಕೆ ಬದಲಾವಣೆ
ನಾ ದೂರ ಬಂದ ಕೂಡಲೆ
ನಮ್ಮ ಪ್ರೀತಿಯನ್ನು ಬೇಡ ಎನಲು
ನಿನಗೆ ಬಂತು ಯಾವ ಖಾಯಿಲೆ

ಕ್ರೂರಿ ನಿನ್ನ ಕರೆಗಾಗಿ
ಕ್ಷಣ ಕ್ಷಣವೂ ಕಾಯುತಿದ್ದೆ
ಹೇಗಿರುವೆ ಎಂದೂ ಕೇಳದೆ
ನೀ ಬೇಡ ಎಂದು ಬಿಟ್ಟು ಹೋದೆ॥

ನಿನ್ನಿಂದ ದೂರ ಬಂದಿರುವೆ
ಇಲ್ಲಿ ಯಾರನ್ನೂ ಮೋಹಿಸಿಲ್ಲ
ನೀನು ಕೂಡ ನನ್ನಂತೆಯೆ
ಇರುವೆಯೋ ಇಲ್ಲವೋ ಗೊತ್ತಿಲ್ಲ

ನಂಭಿಕೆ ಇತ್ತು ನಿನ್ನ ಮೇಲೆ
ನೀ ತುಂಬಾ ಒಳ್ಳೆ ಹುಡುಗಿ ಎಂದು
ಈಗೇಕೋ ಅನಿಸುತಿಲ್ಲ ನೀನು
ನಾ ಪ್ರೀತಿಸಿದ ಬೆಡಗಿ ಎಂದು

ಮೂರು ತಿಂಗಳಾದ ಮೇಲೆ
ಮತ್ತೆ ಕರೆಯ ಮಾಡಿದೆ
ಏನು ಎತ್ತ ಹೇಳದೇನೆ
ನನ್ನ ಹೃದಯವನ್ನು ಒಡೆದೆ
ನನ್ನ ಹೃದಯವನ್ನು ಮುರಿದೆ

ಕ್ರೂರಿ ನಿನ್ನ ಕರೆಗಾಗಿ
ಕ್ಷಣ ಕ್ಷಣವೂ ಕಾಯುತಿದ್ದೆ
ಹೇಗಿರುವೆ ಎಂದೂ ಕೇಳದೆ
ನೀ ಬೇಡ ಎಂದು ಬಿಟ್ಟು ಹೋದೆ ‖

ನೀ ಕರೆ ಮಾಡಿದ ಕೂಡಲೇ
ಖುಷಿಯಿಂದ ಕಂಬನಿ ತುಂಬಿತ್ತು
ನಿನ್ನ ಧ್ವನಿ ಕೇಳಿದ ಕೂಡಲೇ
ನನ್ನ ಗಂಟಲೆಲ್ಲಾ ಉಬ್ಬಿತ್ತು

ನೀ ಪ್ರೀತಿ ಮುರಿದ ಕೂಡಲೇ
ಕಣ್ಣಿಂದ ನೀರು ಸುರಿಯಿತು
ಮನದಲ್ಲಿ ಬೆಂಕಿ ಬಿದ್ದಿತು
ನನ್ನ ಲೋಕವೆಲ್ಲಾ ಶೋಕ-ಶೋಕವಾಯಿತು,
ಶೋಕಮಯವಾಯಿತು, ಶೋಕದಲ್ಲಿ ಮುಳುಗಿತು

ಕಾರಣ ಹೇಳಿದ್ದರೆ
ಕೊಂಚ ತಣ್ಣಗಾಗುತಿದ್ದೆ
ದಿನವೂ ಕಾರಣ ಹುಡುಕುತ
ರಂಜನ್ ಜಗವು ಸೊರಗಿತು

ಕ್ರೂರಿ ನಿನ್ನ ಕರೆಗಾಗಿ
ಕ್ಷಣ ಕ್ಷಣವೂ ಕಾಯುತಿದ್ದೆ
ಹೇಗಿರುವೆ ಎಂದೂ ಕೇಳದೆ
ನೀ ಬೇಡ ಎಂದು ಬಿಟ್ಟು ಹೋದೆ...॥

# ೨೭. ಚಂಗ್ಲುಮುಂಡೆ

ವೋಗೆ ಬ್ಯಾವರ್ಸಿ ಆಳಾಗ್ ವೋಗ್ ನೀನು
ನೀನೊಬ್ಬೆ ಈ ಭೂಮಿಗ್ ಸಿಲೋತ್ಥಮೆ ಏನು
ಯಾವನ್ ಜೊತೆಗಾರು ವೊಂಟೋಗೆ ಯೆಣ್ಣೆ
ವುಡ್ಗಿರಿಗೇನಿಲ್ ಬರ್–ಗಿರವೇನು

ನೀನಿಲ್ಲ ಅಂದ್ರೆ ಇನ್ನೊಬ್ಳು ಬತ್ತಳೆ
ಅವ್ಳಿಲ್ಲ ಅಂದ್ರೆ ಅವ್ರವ್ವ ಸಿಗ್ತಳೆ
ಯಾರು ಇಲ್ಲ ಅಂದ್ರೆ ನಮ್ಮವ್ವನೆ ಅವ್ಳೆ
ದಿನುಕ್ ಮೂರ್ದಪ ಉಣ್ಣಕ್ ಇಕ್ತಳೆ

ನೀನ್ ವೊಂಟೋಗಿದ್ಕೇನ್ ಬೇಜಾರ್ ಆಯ್ತಿಲ
ನಿನ್ ವೊಸ ವುಡ್ಗುನ್ ನೆನ್ಸಕಂಡ್ ನಗು ಬತ್ತಾದೆ
ನುಲ್ಕಂಡ್–ನುಲ್ಕಂಡ್ ಅವ್ನ್ ಜೊತ್ಗೆ ಮೂರ್ದಿನ ಇದ್ದಿಯೊ
ಇಲ್ಲ ಹನ್ನೊಂದ್ದಿನುಕ್ ಅವ್ನ್ಬಿಟ್ವೊಂಟೆವೋದಿಯೊ

ನಿನ್ನುನ್ ಇಡ್ಕಂಡೋಗ್ ಮೇಯ್ಸುಮ ಅಂತಂದ್ರೆ
ಆಡು–ಕುರಿಗಿಂತ್ತೆಚ್ಚಾಗೆ ಮೇಯ್ತಿದ್ದೆ
ನಿನ್ನುನ್ ಮೇಯ್ಸುಬದ್ಲು ನಾಕ್ ಹಸನಾರು ಮೇಯ್ಸಿದ್ರೆ
ನಮ್ಮೂರ್ನಾಗ್ ನಾನಿವತ್ ರಾಜ್ನಂಗ್ ಇರ್ತಿದ್ದೆ

ರಾಜ–ರಾಣಿಯಂಗ್ ಬದ್ಕುಮ ಅಂತ
ಆಸೆ ವುಟ್ಟುಸ್ದಲ್ಲೆ ಬೋಸುಡ್ಕೆ
ಇವತ್ ನೋಡುದ್ರೆ ಬೆಂಕಿ ನೀರಂಗ್
ಬೇರೆಯಾಗಿರುಮ ಅನ್ತಿಯಲ್ಲೆ

ನಿನ್ ಗೋಸ್ಕರ ಸಾಜಾನ್ನಂಗ್
ಅರ್ಮನೆ ಬೇರೆ ಕಟ್ಸುಮ ಅಂತಿದ್ದೆ
ಅಪ್ಪಿ ತಪ್ಪಿ ಕಟ್ಸಿದಿದ್ರೆ ಇವತ್
ನನ್ ಕೈಯಾಗೇನೆ ಕೆಡುವ್ಬೇಕಿತ್ ಕಣ್ಲೆ

ನನ್ನ ಜೊತೆಗಿದ್ದಾಗ್ ಕೇಳ್ತ ಇದ್ದೆ
"ಪ್ರೀತಿ ಅಂದ್ರೆ ಏನು ಗೊತ್ತೇನ್ಲ?"
ನನ್ ಪೆನ್ನಾಣೆ ಹೇಳ್ತ ಇವ್ನಿ
ನೀನ್ ಮಾಡಿದ್ದಂತು ಪ್ರೀತಿ ಅಲ್ಲ

ಕಣ್ಣಿಕ್ಕಂಡ ಐಕ್ಳನೆಲ್ಲ ಜಡೆಗೆ ಗಂಟಾಕ್ಕಂತಿದ್ದೆ
ರಂಜನ್ ನೀನೆ ಎಲ್ಲ ಅಂತ ಸುಮ್ಕೆ ಪುಂಗಿ ಊದುತಿದ್ದೆ
ಪುಂಗಿ ಮುಂದೆ ನಾನು ಕೂಡ ಮೈಮರ್ತು ನುಲೀತಿದ್ದೆ
ಇವತ್ ನೀನು ಎದ್ರು ಗಿದ್ರೆ ಹಂಗೆ ಎತ್ತಿ ಕುಕ್ಕುತಿದ್ದೆ

ನಿನ್ನಂತ ಚಂಗ್ಲು ಮುಂಡೆ
ಈ ಭೂಮಿ ಮ್ಯಾಗೆ ಯಾರು ಇಲ್ಲ
ಅಪ್ಪಿ ತಪ್ಪಿ ಇದ್ರು ಕೂಡ
ನಿನ್ನ ಕಾಲಿಗೂನು ಸಾಲಕಿಲ್ಲ

ಅಂತ ಹಲಾಲ್ ಛತ್ರಿ ನೀನು
ಸೀಮೆಗಿಲ್ದ ಬಿತ್ರಿ ನೀನು
ನೀನೊಂಟ್ರೆ ಹೋಗು ಹೆಂಗೊ
ಜಿಗ್ದಾಡ್ ಕಂಡು ಇರ್ತೀನ್ ನಾನು...

# ೨೮. ರೈಲಲ್ಲಿ

ಆ ಹುಡುಗಿ ಇವನನ್ನು
ಈ ಹುಡುಗ ಅವಳನ್ನು
ಮೈಸೂರಿನ ರೈಲಲ್ಲಿ
ಕಣ್ಣಲ್ಲೇ ತಿನ್ನುತ್ತ

ಲೆಕ್ಕಿಸದೆ ಜನರನ್ನು
ಕೇಳಿಸದು ಮತ್ತೇನು
ಹರೆಯದ ಹಸಿಪೋಲಿ
ಕನಸಲ್ಲಿ ಮುಳುಗುತ್ತ

ಒಪ್ಪಿಗೆಯು ಯಾಕಿನ್ನು
ನೂರಾರು ಮಾತನ್ನು
ತಂಗಾಳಿ ಕಿವಿಯಲ್ಲಿ
ಪಿಸುಗುಟ್ಟಿ ಕಳಿಸುತ್ತ

ಗೊತ್ತಿಲ್ಲ ಹೆಸರೇನು
ತಿಳಿದರೂ ಫಲವೇನು?
ಈ ಸ್ವಚ್ಛ ಪ್ರೀತಿಯಲಿ
ಮನಸುಗಳೆ ಶಾಶ್ವತ

'ಎದ್ದು ಬಾ ಬಳಿ ನೀನು
ತಾಕು ಕಿರುಬೆರುಳನ್ನು',
ಆ ಹುಡುಗಿ ಎದೆಯಲ್ಲಿ
ಎಲ್ಲಿಲ್ಲದ ತುಡಿತ.

'ನಾನೇನೋ ಬರುವೆನು
ನಿಮ್ಮಪ್ಪ ಇರುವನು',
ಈ ಹುಡುಗ ಕುಳಿತಲ್ಲಿ
ಚಿಂತೆಯಲಿ ಬೆರೆತ.

ಈ ಜೋಡಿ ಗೋಳನ್ನು
ಬಗೆಹರಿಸೊ ಪರಿಯನ್ನು
ಕವಿ ರಂಜನ್ ತಲೆಯಲ್ಲಿ
ಹುಡುಕುತ್ತಾ ಅರಿತ

ಅಪರೂಪಕೆ ಕಾಣುವ ಚುಕ್ಕಿಯನ್ನು
ಸೆರೆಹಿಡಿದು ಕೂಡಿಡಲು ಸಾಧ್ಯವೇನು?
ಕ್ಷಣಕಾಲ ಈ ಪ್ರೇಮ ಭಾವದಲ್ಲಿ
ಹಾಯಾಗಿ ಜೇನಲ್ಲಿ ಮೀನಾಗಿ ಈಜುತ್ತ

ಮುಗಿಯುವಾ ಪಯಣವನು,
ಅನುಭವಿಸಿ ಸ್ವಾಧವನು,
ಈ ಪ್ರೇಮ ವ್ಯೂಹದಲಿ
ಮತ್ತೊಮ್ಮೆ ಮತ್ತೆಲ್ಲೊ ರೈಲನ್ನು ಹತ್ತುತ್ತಾ...

# ೨೯. ಹದಿ ಹರೆಯದ ಕೂಳೆಗಳು

ಇವತ್ ಇವ್ನು ನಾಳೆ ಅವ್ನು
ಇಬ್ರೂ ಹೋದ್ರೆ ಮೂರ್ನೆ ಅವ್ನು
ಸೋಕಿಗಾಗಿ ಪ್ರೀತಿ ಮಾಡೊ
ಹದಿ ಹರೆಯದ ಕೂಳೆಗಳು

ಸೂಳೆಯಾಟ ಆಡುವಂತ ಬಿಕ್ನಾಸಿ ಬಿತ್ರಿಗಳು
ದಿನಕ್ಕೊಬ್ರ ಪ್ರೀತಿ ಮಾಡೊ
ಕೋತಿ ಮನದ ಛತ್ರಿಗಳು
ಇವ್ರಿಗಂತು ಸಾಲಕಿಲ್ಲ ನೂರು ಪ್ರೇಮ ಪತ್ರಗಳು

ಒಂದೇ ಪತ್ರ ನಾಲ್ಕು ನಕಲು
ನಾಲಕ್ರಲ್ಲಿ ಒಬ್ಬು ಬಿದ್ಲು
ಅವ್ನೆಲ್ಲಿ ಸಾಕಾಯ್ತುಳೆ ಈ ಬಡ್ಡಿ ಹೈಕ್ಳುಗೆ
ನಾಲಕಲ್ಲ ನಲವತ್ ಬಿದ್ರು, ಇಂಗಕಿಲ್ಲ ಇವರ ಚೂಲು

ಹೆಣ್ಣೈಕ್ಳೇನ್ ಕಮ್ಮಿ ಇಲ್ಲ
ಒಬ್ಬ ಗಂಡು ಸಾಲಕಿಲ್ಲ
ಅವ್ರ್ ಕೂದ್ಲಷ್ಟ್ ಹೈಕ್ಳ ಬೀಳುಸ್ಕಂಡ್ರು
ಇನ್ನೂ ತೀಟೆ ತೀರಕಿಲ್ಲ

ಅವ್ಳಿಂದೆ ಬಿದ್ದ ಪೆದ್ದರೆಲ್ಲ
ಹೊಡ್ದಾಡ್ಕಂಡ್ ಸಾಯ್ತ ಅವ್ರೆ
ಎಲ್ರು ರಸವ ಹೀರ್ಕಂಡ್ ಅವ್ಳು
ಚಿಟ್ಟೆಯಂಗೆ ಹಾರ್ತಾ ಅವ್ಳೆ

ಬೆಳ್ಗೆ ಇವ್ರು ಪ್ರೀತಿಗ್ ಬಿದ್ರೆ
ಸಂಜಿಕೇನೇ ಬ್ರೇಕಪ್ ಅಂತೆ
ಸಂಜಿಕೊಂದು ಬ್ರೇಕಪ್ ಆದ್ರೆ
ರಾತ್ರಿಕೊಬ್ರು ಚಾಟಿಂಗ್ಗ್ ಅಂತೆ

ಸನ್ಯಾಸಿ ಆಯ್ತಿವನ್ನೊ ಸೀದ ಸಾದ ಸೂರರೆಲ್ಲ
ಕಂಡ್ಕಂಡ ಹೆಣ್ಣೈಕ್ಳನ್ನ ತಿನ್ನೋಹಂಗ್ ನೋಡ್ತರಂತೆ
ಯಾಕ್ರಯ್ಯಾ ಅಂತ ಅಂದ್ರೆ,
ಅವ್ರ್ನ ಕೇಳಕ್ಯಾರು ಇಲ್ವಂತೆ

ಒಬ್ರುನ್ ಪ್ರೀತಿ ಮಾಡ್ದೆ ಇದ್ರೆ
ಊರೋರ್ನೆಲ್ಲ ನೋಡ್ಬೋದಂತೆ
ಊರೋರ್ನೆಲ್ಲ ಪ್ರೀತಿ ಮಾಡಿ
ಒಬ್ರುನ್ ಮದ್ವೆ ಆಯ್ತರಂತೆ,

ಇವೇ ಇವರ ನೀತಿಗಳು
ತಲೆ ಇಲ್ಲದ ತತ್ವಗಳು
ಪ್ರೀತಿ ಅರ್ಥ ತಿಳಿಯದಂತ
ಹದಿ ಹರೆಯದ ಕೂಳೆಗಳು..

# ೩೦. ಕಸವಾದೆ

ಇಷ್ಟವಿಲ್ಲ ನಿನಗೀಗ
ನನ್ನ ಪ್ರೀತಿ ಮೇಲೆ
ಕಸಾ ಕಣೆ ಕಬ್ಬಿನ ಜೊಲ್ಲೆ,
ರಸ ಖಾಲಿಯಾದಮೇಲೆ॥

ನಾ ನಿನ್ನ ಪಾಲಿಗೆ ಕಸವಾದನೇನು?
ನೆನ್ನೆ ಬೇಕಿದ್ದವ ಇಂದು ಬೇಡವಾದನೇನು?
ಅಂದಾಜಿಲ್ಲ ಚಿನ್ನ ನಿನಗೆ ನನ್ನ ಪ್ರೀತಿ ಬಗ್ಗೆ
ನಿನ್ನ ಗುಂಗಲ್ಲಿ ಅನುಭವಿಸಿದ ನೋವ ಬಲ್ಲೆಯೇನು?

ಅರ್ಥವಿಲ್ಲದಂತ ಕಾರಣಗಳನು ಹೇಳಿ
ಅರ್ಥವಾಗದಂತ ಸ್ಥಿತಿಯಲ್ಲಿ ಬಿಟ್ಟು ಹೋದೆ
ಅರ್ಥವಾಗಿದ್ದರೆ ನಾ ತಿದ್ದುಕೊಳ್ಳುತಿದ್ದೆ
ಅರ್ಥಮಾಡಿಸದೆ ಅರ್ಧಕ್ಕೆ ತೊರೆದು ಹೋದೆ

ಎಲ್ಲರೂ ನಾಯಿ, ಬೆಕ್ಕು, ಹಕ್ಕಿಗಳನು ಸಾಕಿದರೆ
ನಾ ಮಾತ್ರ ಒಂದು ಕೊಳಕು ಹಾವನ್ನು ಸಾಕಿದ್ದೆ
ಹಾಲನ್ನು ಕುಡಿಸಿ, ಅರಮನೆಯಲ್ಲಿ ಇರಿಸಿ,
ಸದಾ ಅದನು ನಾನು ಪ್ರೀತಿಸಿದಂತ ತಪ್ಪಿಗೆ

ಅದರ ಬಾಯಿಗೆ ಸಿಹಿಪೇಡವನ್ನು, ತಿನ್ನಿಸಲು ಹೋದಾಗ
ನನ್ನ ಕೈಗೆ ಕಚ್ಚಿ, ವಿಷವ ಕಾರಿದಂತ
ಒಂದು ಕೆಟ್ಟ ಕೊಳಕು ಹಾವನ್ನು ನಾ ಸಾಕಿದ್ದೆ
ವಿಪರೀತ ವಿಷ ತುಂಬಿದ ಹಾವನ್ನು ನಂಬಿದ್ದೆ

ನೀನೇ ಸರ್ವಸ್ವವೆಂದು, ನಿಷ್ಕಲ್ಮಷವಾಗಿ ಪ್ರೀತಿಸಿದರೂ
ನೀನೇ ನನ್ನ ಮಡದಿಯೆಂದು, ಮಂಗಳಸೂತ್ರ ಮಾಡಿಸಿದರೂ
ಮಂಗನ ಕೈಯಲ್ಲಿ ಮಾಣಿಕ್ಯವೇಗೋ, ಹಾಗೆ
ನನ್ನಂಥ ಮಾಣಿಕ್ಯವನ್ನು ರಸ್ತೆಯಲ್ಲಿ ಎಸೆದು ಹೋದೆ

ನಾನಲ್ಲ ನಿನ್ನಿಂದೆ ಬಂದು
ಪ್ರೀತಿಸೆಂದು ಬೇಡಿದವ
ನೀನಾಗೆ ಬಂದು ನನ್ನ
ಪ್ರೀತಿಯೊಳಗೆ ಕೆಡವಿದೆ

ನಾನೆಷ್ಟು ಬೇಡ ಎಂದರೂ
ಸಾಯುವೆನೆಂದು ಅಳುತ್ತಾ
ದಯಮಾಡಿ ಪ್ರೀತಿಸೆಂದು
ನನ್ನನೆಷ್ಟು ಗೋಗರೆದೆ

"ಸರಿ" ಎಂದು ಒಪ್ಪಿ
ನಿನ್ನ ಪ್ರೀತಿಸಿದ ಹುಡುಗನನ್ನು
ಇಷ್ಟ ಬಂದ ಹಾಗೆ ಬಳಸಿಕೊಂಡು
ಕಸದಂತೆ ಎಸೆದು ಹೋದೆ

ಆಟವಲ್ಲ ಪ್ರೀತಿ, ಅಮೂಲ್ಯ ರತ್ನ ನಲ್ಲೆ
ನನ್ನಂತ ಹುಡುಗ ಮತ್ತೆ ಸಿಗಬಹುದೇನೋ
ಆದರೆ, ರಂಜನ್ ಪ್ರೀತಿಸಿದಷ್ಟು ಪ್ರೀತಿಸುವ
–ಹುಡುಗ ಎಲ್ಲೂ ಸಿಗಲಾರ ನಾಳೆ

ಇಷ್ಟವಿಲ್ಲ ನಿನಗೀಗ
ನನ್ನ ಪ್ರೀತಿ ಮೇಲೆ
ಕಸಾ ಕಣೆ ಕಬ್ಬಿನ ಜೊಲ್ಲೆ,
ರಸ ಖಾಲಿಯಾದಮೇಲೆ..॥

# ೩೧. ಪ್ರೀತಿ ಸೇತ್ವೆ

ಕುತ್ಗೆ ಅವ್ನ್ದು ತಾಳಿ ಇವ್ನ್ದು
ಕೆನ್ನೆ ಅವ್ನ್ದು ತುಟಿ ಇವ್ನ್ದು
ಪ್ರೀತಿ ಪ್ರೇಮ ಕಾಮ ಕಾಲು
ಕಾಸು ಕೂಸು ಎಲ್ಲಾ ಅವ್ನ್ದು

ಆದ್ರೂ ನನ್ ಗೆಳ್ಯ ಸಿಕ್ದ
ಪೋಲೀಸ್ನೋರ ಕೈಯಲಿ
ಸೇತ್ವೆಯಂಗೆ ಇದ್ದ ಅವ್ನು
ಅವರಿಬ್ಬರ ನಡುವಲಿ

ಅವೇನೋ ಆತ್ರುಕ್ ಹುಟ್ದವ್
ಅಪ್ಪ ಅವ್ವನ್ ಮರ್ತೋದ್ವು
ನಾವ್ ಮಾಡದೇ ಸರಿ ಅಂತ
ಮನೇ ಬುಟ್ಟು ವೋಡೋದ್ವು

ಕರ್ಮ ನನ್ ಗೆಳ್ಯ ಇದ್ದ
ಪಾರಿವಾಳ್ದಂಗ್ ಅವ್ರ ಮಧ್ಯೆ
ಪ್ರತೀ ದಿನಾ ಹೊತ್ತಾಡ್ತಿದ್ದ
ಸುದ್ದಿ ಪತ್ರ ಮೀಡ್ಯಾದಂಗೆ

ಅವ್ರು ಮಾತಾಡ್ಬೇಕಂದ್ರೆ ಇವ್ನು
ಮಧ್ಯುದಲ್ಲಿ ನಿಲ್ಲಬೇಕು
ಅವ್ಳೇಳಿದ್ ಇಲ್ಲೇಳ್ಬೇಕು
ಇವ್ನೇಳಿದ್ ಅಲ್ಲೇಳ್ಬೇಕು

ಈ ಪ್ರೀತಿ ಬಲೆಲ್ ಅವ್ರ ಜೊತ್ಗೆ
ಇವ್ನೂ ಕೂಡ ನಿಂತ್ಕಂಡಿದ್ದ
ಅವೆಳ್ಡ್ ಏನೋ ಹಾರೋದ್ವು
ಇವ್ನ್ ಮಾತ್ರ ತಗ್ಲಾಕ್ಕಂಡ

ಈಗ ಪೋಲೀಸ್ನೋರು ಗುಮ್ತಾ ಅವ್ರೆ
ಹೇಳು ಅವ್ರು ಎಲ್ಲವ್ರಂತ
ಪಾಪ ಇವ್ನೇನ್ ಹೇಳನು ಮಣ್ಣು
ಗೊತ್ತಿಲ್ಲ ಅವ್ರು ಎಲ್ಲೋದ್ರಂತ

ಒಟ್ನಲ್ ಮಾವಂದ್ರು ಬುಡಲ್ಲ
ಇವ್ನಂತೂ ಹೇಳಲ್ಲ
ಸೇತ್ವೆ ಮುರ್ಕಂಡ್ ಬೀಳ್ತಾ ಇದ್ರೂ
ಅವೆಳ್ಡಂತೂ ಬರಲ್ಲ

ಮನೇವ್ರ್ ಕಣ್ಣೀರ್ ಕಾಣ್ದೆ ಅವ್ರು
ದೂರ್ದಾಗ್ ಎಲ್ಲೋ ಕೇಯ್ದಾಡ್ತವ್ರೆ
ಕಣ್ಣೀರಾಕ್ಕಂಡ್ ರಂಜನ್ ಗೆಳ್ಯ
ಸ್ಟೇಷನ್ ಅಲ್ಲಿ ಗೋಳಾಡ್ತವ್ನೆ..

# ೩೨. ಏನಿದೆ?

ಮುಖದಲ್ಲೇನಿದೆ?
ಇಂದು ಅರಳಿದೆ, ನಾಳೆ ಬಾಡುತ್ತದೆ.
ಆಕಾರದಲ್ಲೇನಿದೆ? ಅಂಕು–ಡೊಂಕು, ಉದ್ದ–ಗಿಡ್ಡ,
ಸಣ್ಣ–ದಪ್ಪಗಿದ್ದರೂ ಸಾಗುತ್ತದೆ.

ನಿನ್ನ ನಲ್ಲ ಇಚ್ಛಿಸುವುದು
ಬರೀ ನಿನ್ನ ಪ್ರೇಮ
ನಿನ್ನ ಮನದಲ್ಲಿ ನನಗಿರುವ
ಶುದ್ಧವಾದ ಪ್ರೇಮ ॥

ಬಣ್ಣದಲ್ಲೇನಿದೆ?
ಮೈಯ ಚರ್ಮ ಬಗೆಬಗೆಯ ಬಣ್ಣ ಹೊಂದಿದ್ದರೂ,
ಮೈಯೊಳಗೆ ಹರಿಯುವ ರಕ್ತ ಕೆಂಪಾಗಿದೆ.

ವಯಸ್ಸಿನಲ್ಲೇನಿದೆ?
ದಿನಕಳೆದಂತೆ ವಯಸ್ಸು ವೃದ್ಧಿಸುತ್ತಾ,
ನೀನು ಬದುಕುವ ಆಯಸ್ಸು ಕ್ಷೀಣಿಸುತ್ತಾ,
ನಿನ್ನ ವೈಯಾರವೆಲ್ಲ ಸಂಪೂರ್ಣ ಕುಗ್ಗುತ್ತದೆ.

ನಿನ್ನ ನಲ್ಲ ಇಚ್ಛಿಸುವುದು
ಬರೀ ನಿನ್ನ ಪ್ರೇಮ
ನಿನ್ನ ಮನದಲ್ಲಿ ನನಗಿರುವ
ಶುದ್ಧವಾದ ಪ್ರೇಮ ॥

ಹಣದಲ್ಲೇನಿದೆ?
ಇಂದು ಬಡವನಾದರೂ, ನಿಧಾನವಾಗಿ ಸಂಪಾದಿಸುವೆ
ನಾಳೆ ಇಲ್ಲ ನಾಡಿದ್ದೇ.

ಕುಲದಲ್ಲೇನಿದೆ?
ಕಾಣದ್ದನ್ನು ನಂಬದ ಈ ನಾಸ್ತಿಕನ ಕಣ್ಣಿಗೆ,
ನಾವಿಬ್ಬರೂ ಮನುಕುಲದವರೆಂಬುದು ಮಾತ್ರ ಕಾಣುತಿದೆ.

ಸ್ಪರ್ಶದಲ್ಲೇನಿದೆ?
ಮೈಮೇಲೆ ಬಿದ್ದು, ಕೈ-ಕೈಹಿಡಿದು ಅಲೆವುದಕಿಂತ
ದೂರದಲ್ಲೇ ಕುಂತು, ಕಣ್ಣಲ್ಲೇ ಸಂದೇಶವ
ಕಳಿಸುವುದರಲ್ಲಿ ಸುಖವಿದೆ.

ಮಾತಿನಲ್ಲೇನಿದೆ?
ಗಂಟಲರಿದುಕೊಂಡು ಗಂಟೆ-ಗಂಟೆ ಭಜನೆಗಿಂತ
ಮನಸಲ್ಲೇ ಮೌನವಾಗಿ ಹರಸುವಂತ ಪ್ರೀತಿಗರ್ಥವಿದೆ.

ರಂಜನ್ ಇಚ್ಚಿಸುವುದು
ಬರೀ ನಿನ್ನ ಪ್ರೇಮ
ನಿನ್ನ ಮನದಲ್ಲಿ ನನಗಿರುವ
ಶುದ್ಧವಾದ ಪ್ರೇಮ ॥

# ೩೩. ನಿಜವಲ್ಲ

ಮಗುವಂತೆ ನೀನು ಏನೂ ಗೊತ್ತಿಲ್ಲ
ಬಾಯಿಗೆ ಬೆರಳಿಟ್ಟರೂ ಕಚ್ಚುವುದಿಲ್ಲ
ಹೀಗಂದುಕೊಂಡದ್ದು ಯಾವುದೂ ನಿಜವಲ್ಲ
ನಿಜವೇನೆಂದರೆ ನೀನು ಹುಡುಗಿಯೇ ಅಲ್ಲ

ಬೆಂಕಿಯಂತೆ ನನ್ನ ಪ್ರೀತಿ, ಹುಡುಗಾಟವಲ್ಲ
ಹುಡುಕಾಡಿದರೂ ನನ್ನಂತ ಹುಡುಗ ಸಿಗುವುದಿಲ್ಲ
ನೀ ಕೊಟ್ಟ ಭರವಸೆಗಳು ಖಂಡಿತ ನಿಜವಲ್ಲ
ನಿಜವೇನೆಂದರೆ ನೀನು ಹುಡುಗಿಯೇ ಅಲ್ಲ

ಹುಚ್ಚನಂತೆ ಪ್ರೀತಿಸುತಿದ್ದ ಈ ನಿನ್ನ ನಲ್ಲ
ರಂಜನ್ ಮೇಲೆ ನಿನ್ನ ಪ್ರೀತಿ ಜಾದುವಂತೆ ಸುಳ್ಳ?
ಜಗವೇ ಎದುರಾದರೂ ಜೊತೆಗಿರುವೆ ಅಂದದ್ದು ನಿಜವಲ್ಲ
ನಿಜವೇನೆಂದರೆ ನೀನು ಹುಡುಗಿಯೇ ಅಲ್ಲ

ಪಿಶಾಚಿನಿ ನೀನು ಹುಡುಗಿಯೇ ಅಲ್ಲ
ಪ್ರೀತಿಸುವ ಪರಿ ನಿನಗೆ ತಿಳಿದಿಲ್ಲ
ಪ್ರಪಂಚದಲಿ ಪ್ರೀತಿ ಎಳ್ಳಷ್ಟೂ ನಿಜವಲ್ಲ
ನಿಜವೇನೆಂದರೆ ಪ್ರೀತಿ ಮಾನವರಿಗಲ್ಲ

ಮಾನವರ ಮನಸ್ಸಲ್ಲಿ ಭಾವನೆಗಳಿಲ್ಲ
ಆಕರ್ಷಣೆಯ ಅಂಧಕಾರದಲಿ ಮುಳುಗಿದೆ ಜಗವೆಲ್ಲಾ
ನೀ ನನ್ನ ಪ್ರೀತಿಸುತಿದ್ದೆ ಎಂಬುದೂ ನಿಜವಲ್ಲ
ನಿಜವೇನೆಂದರೆ ನಿನಗೆ ನನ್ನ ಹೆಸರೂ ನೆನಪಿಲ್ಲ..

# ೩೪. ನನ್ನ ಮಹಾತಾಯಿ

ನೋವಿನಲಿ ನಲಿವಿನಲಿ
ಗೆಲುವಿನಲಿ ಸೋಲಿನಲಿ
ಶಾಂತಿಯಲಿ ಕ್ರಾಂತಿಯಲಿ
ಬ್ರಾಂತಿಯಲಿ ಮೋಹದಲಿ

ಹನಿ–ಹನಿ ರಕ್ತದಲಿ
ರಕ್ತದಾ ಚಲನೆಯಲಿ
ಡವ–ಡವಾ ಬಡಿತದಲಿ
ಬಡಿಯುವಾ ತುಟಿಗಳಲಿ

ಮನದ ಮೂಲೆಮೂಲೆಯಲಿ
ಉಸಿರ ಅಣು–ಅಣುವಿನಲಿ
ಸಿಹಿಯಾದ ವಾದದಲಿ
ನಾಲಿಗೆಯ ನಾದದಲಿ

ಕುಣಿಯುವಳಾಕೆ, ನಲಿಯುವಳಾಕೆ,
ಹರಿಯುವಳಾಕೆ, ಹೊರಳುವಳಾಕೆ,
ಆಕೆ ಕರುನಾಡ ಕುಲದವಳು
ಕಣ್ಣಿಗೇ ಕಾಣಿಸಳು

ಎಲ್ಲರನು ತಾಕುವಳು
ಮುಟ್ಟಲೇ ಸಿಗದವಳು
ಕವಿ ಕೈಯ ಬೆರಳವಳು
ನುಡಿಯುವಾ ಸ್ವರವವಳು

ಜ್ಞಾನದಾ ಬೆಳಕವಳು
ನಮ್ಮನ್ನು ಸ್ಪರ್ಶಿಸುವಳು

ಸ್ಪರ್ಶಿಸೊಳ ಸೇರುವಳು
ಸೇರಿ ಮಾತಾಡುವಳು

ಮೇಲು–ಕೀಳು ಇರದವಳು
ನೀರಿನಂತೆ ಪರಿಶುದ್ಧಳು
ಪ್ರೀತಿಯನು ತುಂಬುವಳು
ತುಂಬಿ ಒಂದ್ಮಾಡುವಳು

ಎಲ್ಲರೂ ಒಂದಾಗುವ
ಜೇನಂತೆ ಕೂಡುವ
ಸೊಬಗಿಂದ ಸೇರುವ
ಖುಷಿಯಿಂದ ಹೇಳುವ

ಕನ್ನಡ ಕನ್ನಡ ಕನ್ನಡ ಕನ್ನಡ
ಕನ್ನಡ ಕನ್ನಡ ಕನ್ನಡ ಕನ್ನಡ
ಕನ್ನಡ–ಕನ್ನಡ ಎಂಬ ಕಿಚ್ಚಿಗೆ ಉರಿದು,
ಕನ್ನಡಾಂಬೆ ಕನ್ನಡಿಗರ ಬಾಯ್ತುಂಬಿ ಸಿಡಿದು,
ರಾರಾಜಿಸುವಳಾಕೆ ಭಕ್ತರ ಮಂತ್ರಕ್ಕೆ ಮಣಿದು

ಬೆಳಗಾವಿ, ಬಳ್ಳಾರಿ, ಬೀದರಿನಿಂದ ಹಿಡಿದು
ಕಾರವಾರ, ಕೊಡಗು, ಕೋಲಾರಿನ ತನಕ ಹರಿದು
ಮೈಸೂರು, ಮಂಡ್ಯ, ಬೆಂಗಳೂರಿಗೂ ಒಲಿದು
ಶಿವಮೊಗ್ಗ, ಹಾಸನ, ದಕ್ಷಿಣ ಕನ್ನಡದಲ್ಲಿ ಸುರಿದು

ಕರಾವಳಿಯಲಿ ಕಂಪಾಗಿ,
ಉತ್ತರದಲಿ ಇಂಪಾಗಿ,
ಕೋಲಾರಲಿ ಹೊನ್ನಾಗಿ,
ಮಂಡ್ಯ ನಂಜನಗೂಡಲ್ಲಿ ಸಿಹಿಯಾಗಿ,

ಚರ್ಚಿಸಲು ಛಲವಾಗಿ,
ಕನ್ನಡಿಗರ ಜೀವಜಲವಾಗಿ,
ನನ್ನ ಮಹಾತಾಯಾಗಿ,
ತನ್ನ ಮಕ್ಕಳಿಗೆ ಧ್ವನಿಯಾಗಿ,

ಎಲ್ಲರನು ಸೆಳೆಯುವ
ಜ್ಞಾನವನು ಹರಡುವ
ಕುಡಿಗಳಿಗೆ ಮಿಡಿಯುವ
ಸೊಂಪಾಗಿ ಸುಳಿಯುವ

ಈಕೆಗೆ, ಶಬ್ಧಗಳ ಸಿಂಗಾರ
ಸ್ವರಗಳಾ ಶೃಂಗಾರ
ವ್ಯಂಜನಗಳ ಮಂದಾರ
ಒತ್ತುಗಳ ಸತ್ಕಾರ

ದೀರ್ಘಗಳಿಂದಲಂಕಾರ
ವ್ಯಾಕರಣವೇ ಮಧುಸಾರ
ಮುತ್ತು ಪೋಣಿಸಿದಂತೆ
ಲಿಪಿ ಇವಳ ಲಯಕಾರ

ಲವಲವಿಸೊ ಮಲ್ಲಿಗೆಯನು
ಕಟ್ಟಿದಂತಿವಳ ಪದ
ನುಡಿದರೆ ಮುಡಿದಂತೆ
ಮನಸಿನಲಿ ಹೂಹಾರ

ಬರೆದರೆ ಕಡು ಕುರುಡನಿಗೂ
ಕಾಣುವಂತ ಕ್ರಿಯಾಶೀಲೆ ಇವಳು
ನುಡಿದರೆ ಎಂತಾ ಕಿವುಡನಿಗೂ
ಕೇಳುವಂತ ಕೋಗಿಲೆ ಇವಳು

ತಾಯ ಮಹಿಮೆಯನು ಹೊಗಳುವ
ಮಹತ್ವವನು ಸಾರುವ
ಅಳಿಯದಂತೆ ಉಳಿಸುವ
ಹೊಸಬರಿಗೆ ಕಲಿಸುವ

ಕನ್ನಡ ಕನ್ನಡ ಕನ್ನಡ ಕನ್ನಡ
ಕನ್ನಡ ಕನ್ನಡ ಕನ್ನಡ ಕನ್ನಡ
ಕನ್ನಡ–ಕನ್ನಡ ಎಂದು ವಿಶ್ವವಿಡೀ ಸಾರುವ,
ಕನ್ನಡದ ಸೊಬಗನ್ನು ಹಿರಿಮೆಯಿಂದ ಮೆರೆಸುವ,
ಕನ್ನಡವ ನುಡಿಯದ ಬರಡು ನಾಲಿಗೆಗಳಲಿ
ಕನ್ನಡದ ಮಂತ್ರ ಬೀಜಗಳನು ನಾವು ಬಿತ್ತುವ

ಎಷ್ಟೆಂದು ಹೊಗಳುವೆ
ಈ ಮಾತೆಯನ್ನು ರಂಜನ್?
ಅವಳ ಚರಣಗಳನು ನಮಿಸಿ
ಮಧುರ ಮಂತ್ರಗಳನು ಜಪಿಸುವ

ಕನ್ನಡ ಕನ್ನಡ
ಸಿರಿಕನ್ನಡ ಸವಿಕನ್ನಡ
ಕನ್ನಡ ಕನ್ನಡ
ಸಿರಿಕನ್ನಡ ಸವಿಕನ್ನಡ..

# ೩೫. ನವಿರಾದ ಪ್ರೇಮ

ನಯನಗಳ ಪಿಸುಮಾತಿನ ನವಿರಾದ ಪ್ರೇಮ
ಇಬ್ಬನಿಯಲ್ಲಿ ನೆಂದ ಗುಲಾಬಿಯಂತೆ ಸುಗಮ
ಚರ್ಮವ ಸವರುತ್ತಾ ಕೂರುವುದಲ್ಲ ಪ್ರೇಮ
ನನ್ನ ಪ್ರೇಮವ ನಿನಗೇಳಲು ಸಾಲುವುದಿಲ್ಲ ಜನುಮ

ಜಗದಲ್ಲಿರೊ ಜನರೆಲ್ಲ ಪೂರ್ತಿಯಾಗಿ ಹುಚ್ಚರು
ಬೆಂಕಿಯಂತ ಪ್ರೇಮವನ್ನು ನಂಭದಂತ ನೀಚರು
ಅವರು ಹೇಗಾದರು ಹಾಳಾಗಲಿ ನೀ ಮಾತ್ರ ನಗುತಿರು
ನಿನ್ನ ನಗಿಸಲು ಬೇಕಾದರೆ ನಾ ಆಗುವೆನು ಜೋಕರು

ನಿನಗಾಗಿ ಕಳಿಸುವೆ ಸಂದೇಶಗಳ ಪ್ರತಿದಿನ
ಕಣ್ಣಲ್ಲೇ ಉತ್ತರಿಸು ಓ ನನ್ನ ಚಿನ್ನ
ಬರಗಾಲದಂತೆ ಕಾಡುವುದು ಆ ನಿನ್ನ ಮೌನ
ಪ್ರೀತಿಯ ಮಳೆಯಲ್ಲಿ ನೆನೆಸು ನೀ ನನ್ನ

ನನಗಂತೂ ನಂಭಿಕೆಯಿಲ್ಲ ಕಾಣದಂತ ನಾಳೆ ಮೇಲೆ
ಇಂದೇ ಪ್ರೀತಿಸುವ, ಜಗ ನಾಚುವಂತೆ ಬಾರೆ ನಲ್ಲೆ
ಎಲ್ಲರಾ ಕೆಟ್ಟ ಕಣ್ಣು ನನ್ನ–ನಿನ್ನ ಪ್ರೀತಿ ಮೇಲೆ
ಅವರ ಕಣ್ಣು ಸಿಡಿದೋಗಲಿ ನೀ ರಂಜನ್ ಕೈ ಹಿಡಿಯೆ ನಲ್ಲೆ..

# ೩೬. ಸ್ನೇಹರತ್ನ

ಮಾತನಾಡದಿದ್ದರೂ, ಭೇಟಿಯಾಗದಿದ್ದರೂ,
ಪ್ರತೀದಿನ ಗುಂಪು ಗಟ್ಟಿ ಆಟವಾಡದಿದ್ದರೂ,
ಈ ನಮ್ಮ ಸುಮಧುರ ಸ್ನೇಹಕೆಲ್ಲಿ ಸಾವಿದೆ?
ಎದ್ದು–ಬಿದ್ದು ನಕ್ಕ ಹಳೇ ನೆನಪಿಗೆಲ್ಲಿ ಕೊನೆಯಿದೆ?

ಮನೆ ಅಂಗಳದಲ್ಲಿ ನಿಂತು
ಬಾನಂಗಳಕ್ಕೆ ಸೇತುವೆಯ
ಕಟ್ಟುತಿದ್ದ ಕಾರ್ಯ ಅರ್ಧದಲ್ಲೆ ನಿಂತಿದೆ
ಆ ನಮ್ಮ ಚೇಷ್ಟೆ ಇನ್ನೂ ಹಸಿರಾಗಿದೆ

ಹಸಿಯಾದ ಈ ಮನದಲ್ಲಿ
ಸ್ನೇಹವೆಂಬ ಕಾಳು ಬಿದ್ದು
ಮೊಳಕೆ ಕಡೆದು, ಚಿಗುರು ಹೊಡೆದು,
ಮರವಲ್ಲಾ, ಹೆಮ್ಮರವಾಗಿ ಬಲಿತು–ಬೆಳೆದು ನಿಂತಿದೆ

ಸ್ನೇಹಿತನೆಂಬ ರತ್ನನೊಬ್ಬ, ಸಕಲ ಭಾವಗಳನು
ಒಳಕಲ್ಲಿಗಾಕಿ ಪ್ರೀತಿಯಿಂದ ಒಮ್ಮೆ ಹಾಗೆ ತಿರುವಿದರೆ
ನೋವು–ದುಃಖ ಜಜ್ಜಿ ಹೋಗಿ
ಸಂತೋಷವೆಂಬ ಸಿಹಿಭಾವ ಹೊರಗೆ ಬಂದಿದೆ

ಹೇಗಾದರು ಮರೆಯಲಿ ನಿಮ್ಮನ್ನು ಓ ಗೆಳೆಯರೆ
ರಂಜನ್ ಬರೆದ ಪ್ರತೀ ಹಾಡು,
ಪ್ರತೀ ಕಂಠ, ಪ್ರತೀ ಸಾಲು,
ನಿಮ್ಮ ಜೊತೆ ಸವೆದ ಸಮಯದಾ ಸಾರವಾಗಿದೆ

ಮಾಡಿದೆ ಏನೋ ಮೋಡಿ
ಸ್ನೇಹ ನಮ್ಮ ಮನದ ಮೇಲೆ
ಸೂರ್ಯನಂತೆ, ಚಂದ್ರನಂತೆ,
ನಮ್ಮ ಸ್ನೇಹ ಮುತ್ತಿನಂತೆ

ಮರೆಯದಂತೆ, ಮುಳುಗದಂತೆ,
ನಮ್ಮ ಸ್ನೇಹ ಹಡಗಿನಂತೆ
ಅಲೆ ಇರಲಿ ಮಳೆ ಬರಲಿ
ತೀರ ತಲುಪೊ ವರೆಗು ಜಗ್ಗದಂತೆ

ಸ್ನೇಹರತ್ನ ಧರಿಸಿ ನಾವು ಸುಡುಗಾಡಲಿ ಸುಳಿದರೂ
ಹೆಣಗಳೆಲ್ಲ ಎದ್ದು ಗೆಳೆಯ–ಗೆಳೆಯ ಎಂದು ಕುಣಿದವಂತೆ
ಆಹಾ! ಎಂಥ ಸ್ನೇಹವಿದು, ಯಾರ ದೃಷ್ಟಿತಾಗದಂತೆ
ಹೀಗೆ ಇರಲಿ ಜೊತೆಯಲ್ಲಿ ಹೃದಯದಾ ಬಡಿತದಂತೆ..

# ೩೭. ಸುಳ್ಳು

ಸುಳ್ಳು ನಿನ್ನ ಪ್ರೀತಿ ಸುಳ್ಳು
ಸುಳ್ಳು ನಿನ್ನ ಸಿಹಿ ಮಾತುಗಳು
ಸುಳ್ಳು ನಿನ್ನ ಪ್ರತಿ ಕಥೆಯೂ ಸುಳ್ಳು
ಸುಳ್ಳು ನಿನ್ನ ಸವಿ ಕವಿತೆಗಳು

ಸುಳ್ಳು ನೀ ಕೊಟ್ಟ ಮಾತು ಸುಳ್ಳು
ಸುಳ್ಳು ನಾ ಕಂಡ ಕನಸುಗಳು
ಸುಳ್ಳು ನಿನ್ನ ಆ ನಗುವೂ ಸುಳ್ಳು
ಸುಳ್ಳು ನಿನ್ನ ಕಿಡಿ ನಯನಗಳು

ಸುಳ್ಳು ನಿನ್ ಮನದ ಭಾವನೆ ಸುಳ್ಳು
ಸುಳ್ಳು ನಿನ್ನ ಜೊತೆ ಕಳೆದ ನಿಮಿಷಗಳು
ಸುಳ್ಳು ಜಗದಲ್ಲಿ ಪ್ರೇಮವೇ ಸುಳ್ಳು
ಸುಳ್ಳು ಈ ಜನರ ಭಾವಗಳು

ಸುಳ್ಳು ಹಗಲಿನ ಸೂರ್ಯನೂ ಸುಳ್ಳು
ಸುಳ್ಳು ಇರುಳಿನ ತಾರೆಗಳು
ಸುಳ್ಳು ಮಂಥನದ ಅಮೃತ ಸುಳ್ಳು
ಸುಳ್ಳು ಕಾಣದ ನಾಕ ನರಕಗಳು

ಸುಳ್ಳು ನೀನಿರದ ಬದುಕೇ ಸುಳ್ಳು
ಸುಳ್ಳು ಧರಣಿಯ ಜೀವಿಗಳು
ಸುಳ್ಳು ರಂಜನ್ ನ ಲೇಖನಿ ಸುಳ್ಳು
ಸುಳ್ಳು ಶಾಹಿಯ ಬರಹಗಳು

ಸುಳ್ಳು ನೀ ಪ್ರೀತಿ ಮುರಿದುದು ಸುಳ್ಳು
ಸುಳ್ಳು ನಿನ್ನ ನಿರ್ಧಾರಗಳು
ಸುಳ್ಳು ನೀ ಬೇಡ ಎಂದದು ಸುಳ್ಳು
ಸುಳ್ಳು ನೀ ಕೊಟ್ಟ ಕಾರಣಗಳು

ಸುಳ್ಳು ಈ ವಿರಹ ಅಂದವಾದ ಸುಳ್ಳು
ಸುಳ್ಳು ಸಖಿ ನಿನ್ನ ಬಣ್ಣಗಳು
ನಿಜಹೇಳು ಹೇಳು ಓ ನನ್ನ ನಲ್ಲೆ
ಯಾಕೇಳುತಿರುವೆ ಈ ಕೆಟ್ಟ ಸುಳ್ಳು..

# ೩೮. ನಾನಿನ್ನ ಪ್ರೀತಿಸುವೆ ಏಕೆಂದು ಗೊತ್ತಿಲ್ಲ

ನಾನಿನ್ನ ಪ್ರೀತಿಸುವೆ ಏಕೆಂದು ಗೊತ್ತಿಲ್ಲ,
ಬಹುಶಃ ಆ ನಿನ್ನ ಕಣ್ಣುಗಳ ಮಾಯೆಯೇನೊ
ಚಡಿಪಡಿಸೊ ಆ ನಿನ್ನ ತುಟಿಗಳ ಮಾಯೆಯೇನೊ
ಗುಳಿಕೆನ್ನೆ, ಹೂಮೊಗದ ಮಧುರ ಮಾಯೆಯೇನೊ
ಆ ಉದ್ದ ಕೂದಲಿನ ಘಮದ ಮಾಯೆಯೇನೊ

ನನಗೇ ಗೊತ್ತಿಲ್ಲ ನಾ ನಿನ್ನೇಕೆ ಪ್ರೀತಿಸುವೆ,
ನಿಜ ಹೇಳು ಮಾಡಿರುವೆ ನೀನೇ ಮಾಯೆಯೇನೊ

ಆ ನಿನ್ನ ನಡೆಯುವ ಶೈಲಿನನ್ನ ಸೆಳೆದಂತಿದೆ
ಇಲ್ಲ, ಆ ನಿನ್ನ ಸುಮಧುರ ಧ್ವನಿ ನನ್ನ ಸೆಳೆದಂತಿದೆ
ನೀನುಡುವ ಉಡುಗೆಗಳ ವರ್ಣ ನನ್ನ ಸೆಳೆದಂತಿದೆ
ನಾ ಹೇಳೊ ಕವನ ಕೇಳೊ ನಿನ್ನ ಕರ್ಣ ನನ್ನ ಸೆಳೆದಂತಿದೆ

ನನಗೇ ಗೊತ್ತಿಲ್ಲ ನಾ ನಿನ್ನೇಕೆ ಪ್ರೀತಿಸುವೆ,
ಆಯಸ್ಕಾಂತದಂತೆ ನೀ ನನ್ನ ಮನವನ್ನು ಸೆಳೆದಂತಿದೆ

ನಮ್ಮಿಬ್ಬರ ಪ್ರೀತಿಗಾಗಿ ಈ ನಿಸರ್ಗ ನಿಂತಿರಬಹುದು
ನಾ ನಿನ್ನ ನೋಡಲೆಂದು ರವಿ ಬೆಳಕ ಚೆಲ್ಲಿರಬಹುದು
ನಮ್ಮಿಬ್ಬರನು ನೋಡಿ ಚಂದ್ರನೂ ನಗುತಿರಬಹುದು
ನಮ್ಮುಸಿರು ಸೇರಲೆಂದು ತಂಗಾಳಿ ಬೀಸಿರಬಹುದು

ನನಗೇ ಗೊತ್ತಿಲ್ಲ ನಾ ನಿನ್ನೇಕೆ ಪ್ರೀತಿಸುವೆ,
ನಮ್ಮಿಬ್ಬರ ಮಿಲನಕ್ಕಾಗಿಯೇ ಈ ಭೂಮಿಯೂ ಹುಟ್ಟಿರಬಹುದು

## ಪುಟ ೯೦

ನಿನ್ನ ಆ ನಗುವಿಂದ ನನ್ನ ಖೈದು ಮಾಡಿರುವೆ
ಆ ಪುಟ್ಟ ಹೃದಯದಲಿ ನನ್ನ ಬಂಧಿ ಮಾಡಿರುವೆ
ಮಾತೆ ಆಡದವನನ್ನು ಮುದಿಕಪ್ಪೆ ಮಾಡಿರುವೆ
ದಿನವೂ ನಿನ್ನ ಗುಣಗಾನ ಮಾಡುವಂತೆ ಮಾಡಿರುವೆ

ನನಗೇ ಗೊತ್ತಿಲ್ಲ ನಾ ನಿನ್ನೇಕೆ ಪ್ರೀತಿಸುವೆ,
ರಂಜನ್ ಕೈ ಮುಟ್ಟಿ ನೀ ಏನೋ ಜಾದು ಮಾಡಿರುವೆ..

# ೩೯. ಪ್ರೇಮರಾಗ

ಪ್ರೀತಿ ಧುಮುಕುತಿದೆ ಆಗಸದಿಂದ
ಪ್ರೀತಿ ಹರಿಯುತಿದೆ ನದಿಗಳಲಿ
ಪ್ರೀತಿಯ ಪುಷ್ಪ ಅರಳಿದೆ ಎಲ್ಲೆಡೆ
ಪ್ರೀತಿ ಸುಳಿವ ತಂಗಾಳಿಯಲಿ

ಪ್ರೇಮಿಗಳೆಲ್ಲರು ಕೈಕೈಹಿಡಿದು
ಕಣ್ಣಲೆ ಬಾಣವ ಬಿಡುತಿಹರು
ಪ್ರೀತಿಸದಂತಹ ಪಾಪಿಗಳನ್ನು
ಪಾತಾಳದ ಜೈಲಿಗೆ ಹಾಕಿಹರು

ತುಂತುರು ಪ್ರೀತಿಯ ಮಳೆಗಾಲ
ಹೊನ್ನಿನ ಹನಿಗಳ ಸುರಿಯುತಿದೆ
ಕೇವಲ ಜನಗಳ ತನುವನ್ನಲ್ಲ
ಮನವನೂ ಕೂಡ ನೆನೆಸುತಿದೆ

ಸಂಜೆಯ ಸೂರ್ಯನ ಎಳೆಬಿಸಿಲಿಂದ
ಕಾಮನಬಿಲ್ಲು ಮೂಡುತಿದೆ
ಬಾನು ಭೂಮಿಗಳ ಸೇರಿಸಲೆಂದು
ಸೇತುವೆಯಾಗಿ ನಿಲ್ಲುತಿದೆ

ರಂಜನ್ ಬರೆದ ಕವನವ ಓದುತ
ಅಪ್ಸರೆಯೊಬ್ಬಳು ನಗುತಿಹಳು
ರಂಜನ್–ರಂಜನ್ ಎನ್ನುತ
ನನ್ನ ಮನಸಿಗೆ ದಾಳಿ ಮಾಡಿಹಳು

ಯಾವ ಖಾಯಿಲೆಯು ಇಲ್ಲ ಜಗದಲಿ
ಪ್ರೀತಿಯೆ ಎಲ್ಲಕು ಔಷಧವಿಲ್ಲಿ
ನೋವು–ದುಃಖಗಳ ಹುಡುಕುವುದೆಲ್ಲಿ
ಖುಷಿಯು ತುಂಬಿಹುದು ಜನರೆದೆಯಲ್ಲಿ

ಪ್ರೀತಿ ಧುಮುಕುತಿದೆ ಆಗಸದಿಂದ
ಪ್ರೀತಿ ಹರಿಯುತಿದೆ ನದಿಗಳಲಿ
ಪ್ರೀತಿಯ ಪುಷ್ಪ ಅರಳಿದೆ ಎಲ್ಲೆಡೆ
ಪ್ರೀತಿ ಸುಳಿವ ತಂಗಾಳಿಯಲಿ

ಪ್ರೀತಿಗೆ ಅಡ್ಡ ಬರುವವರಿಲ್ಲ
ಸ್ವರ್ಗದಂತ ಪ್ರಪಂಚವಿದು
ಜನರಿಗೆ ಯಾವ ಚಿಂತೆಯೂ ಇಲ್ಲ
ಪ್ರೇಮದ ಮತ್ತಲಿ ಮುಳುಗಿಹುದು

ಮಿನುಗುವ ಚಂದ್ರ, ತಾರೆಗಳೆಲ್ಲವು
ಹೃದಯದಂತೆಯೇ ಕಾಣುತಿವೆ
ಹಳ್ಳ–ಕೊಳ್ಳ, ತೊರೆ–ಕೆರೆಗಳೆಲ್ಲವೂ
ಸೊಬಗಿಂದ ತುಂತುಂಬಿ ಹರಿಯುತಿವೆ

ಭತ್ತ–ರಾಗಿಯ ಗದ್ದೆಗಳೆಲ್ಲವು
ಪ್ರೀತಿಯ ಘಮವನು ಬೀರುತಿವೆ
ಪ್ರೀತಿಯ ಅಮಲಲಿ ಪ್ರಾಣಿ–ಪಕ್ಷಿಗಳು
ತಬ್ಬಿಕೊಂಡು ಮುದ್ದಾಡುತಿವೆ

ಪ್ರೇಮರಾಗವು ಮೊಳಗಿದೆ ಜಗದಲಿ
ಮುಳ್ಳು ಹೂವಾಗಿ ಮಾರಲಿ ನಲಿವಲಿ
ವಿಷವೂ ಸಿಹಿಯಿದೆ ಒಲವಿನ ಕಡಲಲಿ
ಪ್ರೀತಿಯ ಜೋಡಿ ಹಕ್ಕಿಗಳಿಗೆ,
ಎಂದಿಗೂ ಕೂಡ ಸಾವು ಬರದಿರಲಿ

ಪ್ರೀತಿ ಧುಮುಕುತಿದೆ ಆಗಸದಿಂದ
ಪ್ರೀತಿ ಹರಿಯುತಿದೆ ನದಿಗಳಲಿ
ಪ್ರೀತಿಯ ಪುಷ್ಪ ಅರಳಿದೆ ಎಲ್ಲೆಡೆ
ಪ್ರೀತಿ ಸುಳಿವ ತಂಗಾಳಿಯಲಿ..

# ೪೦. ಅಷ್ಟ-ಕ್ಕಷ್ಟೆ

ನೂರು ಕೋಟಿ ಹುಡುಗಿಯರಿರುವರು
ನೀನೊಬ್ಬಳೆ ಅಪ್ಸರೆಯಲ್ಲ
ಮೂರು ದಿನದ ಬದುಕಿದು ಚಿನ್ನ
ಯಾರು ಕೂಡ ಶಾಶ್ವತವಲ್ಲ

ಪ್ರೀತಿಯಿಲ್ಲದೆ ಬದುಕುವುದು
ಅಸಾಧ್ಯವಲ್ಲ ಕಷ್ಟವಷ್ಟೆ
ಕಷ್ಟ ಕೇವಲ ಎಳ್ಳಿನಷ್ಟೆ
ಎರಡು ಕ್ಷಣದ ಪ್ರೀತಿನಿಂದು
ನಿನ್ನ ವಿರಹ ಅಷ್ಟ–ಕ್ಕಷ್ಟೆ ॥

ಎರಡು ವರ್ಷಗಳಿಂದ ನಿನ್ನ
ಪ್ರೀತಿಸುತ್ತಿದ್ದೆನು ಚಿನ್ನ
ನೀನು ಮಾತ್ರ ನನ್ನನ್ನ
ಜೋಕರ್ ಮಾಡಿದ್ದೆ ಚಿನ್ನ

ರಂಜನ್ ನೀನೇ ಸರ್ವಸ್ವವೆಂದು
ಹೇಳುತಿದ್ದೆ ಸುಳ್ಳುಗಳನ್ನ
ಸುಳ್ಳಿನ ಅರಮನೆಗೆ ನೀನು
ರಾಣಿಯಾಗಿರುವೆ ಚಿನ್ನ

ಚಿನ್ನ–ಚಿನ್ನ ಸಾಕು ನಿಲ್ಲಿಸು
ನಿನ್ನ ಮೊಸಳೆ ಕಣ್ಣೀರನ್ನ
ಮೋಸದ ಆಟ ನಿನ್ನದು
ಪ್ರತಿ ಸಾರಿಯು ಸೋಲುವೆನು ನಾ

ಸತ್ಯಕಿಲ್ಲಿ ಸೋಲು ಖಚಿತ
ಪ್ರೀತಿಗಿಲ್ಲಿ ನೋವು ಖಚಿತ
ಈಗ ನಗುತಲಿದ್ದವರೂ
ಮರುಕ್ಷಣವೇ ಅಳುವುದು ಖಚಿತ

ಪ್ರೀತಿಯಿಲ್ಲದೆ ಬದುಕುವುದು
ಅಸಾಧ್ಯವಲ್ಲ ಕಷ್ಟವಷ್ಟೆ
ಕಷ್ಟ ಕೇವಲ ಎಳ್ಳಿನಷ್ಟೆ
ಎರಡು ಕ್ಷಣದ ಪ್ರೀತಿನಿಂದು
ನಿನ್ನ ವಿರಹ ಅಷ್ಟ–ಕ್ಕಷ್ಟೆ..॥

# ೪೧. ಮಿಂಡ್ರಿಗಳು

ನನ್ನೆಲ್ಲಾ ಗೆಳೆಯರೂ ಕೂಡ
ಬಣ್ಣಬಣ್ಣದ ಬುಗುರಿಗಳಂತೆ
ಹುಡುಗಿಯರ ಹಿಂದಿಂದೆ ಸುತ್ತುವರು
ಜೊಲ್ಲು ಸುರಿಸುತ ನಾಯಿಗಳಂತೆ

ಒಬ್ಬ ವಾರಕ್ಕೊಂದು ಹುಡುಗಿ ಜೊತೆ
ಸುತ್ತುವನು ಗೆಳತಿ ಎನ್ನುತ್ತ
ಇನ್ನೊಬ್ಬ ಒಂದೇ ಹುಡುಗಿ ಜೊತೆ
ಅಲೆಯುವನು ಒಡತಿ ಎನ್ನುತ್ತ

ಮತ್ತೊಬ್ಬ ಸುಮ್ಮನೆ ಕುಳಿತರೆ
ಹುಡುಗಿಯರೇ ಬಂದು ಮುತ್ತುವರು
ಮಗದೊಬ್ಬ ಕೆಮ್ಮಿದರೆ ಸಾಕು
ಹುಡುಗಿಯರು ಕೆನ್ನೆಗೊಡೆಯುವರು

ಬೇಸತ್ತು ಹೋದೆವು ನಾವು
ನೋಡುತ್ತಾ ಇವರ ಆಟಗಳ
ನಮ್ಮಂಥ ಒಂಟಿ ಜೀವಗಳ
ಚುಚ್ಚದಿರಿ ನೀವ್ ಜಗತ್ ಮಿಂಡ್ರಿಗಳ

ಹೆಗಲ ಮೇಲೆ ಕೈ ಹಾಕಿ ಕುಳಿತು
ಹೊರ ಜಗ ಸಂಪೂರ್ಣ ಮರೆತು
ಕೆನ್ನೆ ಮೇಲೆ ಕೊಡುತಿರುವಿರಿ ಮುತ್ತು
ನಿಮ್ಮಿಂದ ಲೋಕ ಕೆಟ್ಟಿದೆ ಥೂಥೂ!

ಕಣ್ಣಾಮುಚ್ಚೆ ಆಡುವ ವಯಸಲಿ
ಕದ್ದು ಮುಚ್ಚಿ ಓಡಾಡುತ್ತಿರುವಿರಿ
ಪಾಠವನ್ನು ಕಲಿಯುವ ಸಮಯದಿ
ಪ್ರೇಮಪತ್ರವ ಕಳಿಸುತಲಿರುವಿರಿ

ನಿಮ್ಮಿಂದಾ ರಂಜನ್ ನಂತಹ
ಮುಗ್ಧರ ಕಣ್ ಮೈಲಿಗೆ ಆಗಿದೆ
ಆಸಿಡ್ ಹಾಕಿ ತೊಳೆದರೂ ಸಹ
ಸರಿ ಹೋಗದ ಸೋಂಕು ತಗುಲಿದೆ

ನಿಮ್ಮ ಗೊಜ್ಜೆ ಮಾತನು ಕೇಳುತ
ನಮ್ಮ ಕಿವಿಯಲ್ಲಿ ರಕ್ತ ಸುರಿಯುತಿದೆ
ಇಂದಲ್ಲಾ ನಾಳೆ ಹೋಗುವಿರಿ
ನಿಮಗಾಗಿ ಸಾವು ಕಾಯುತಿದೆ

ಬೇಸತ್ತು ಹೋದೆವು ನಾವು
ನೋಡುತ್ತಾ ಇವರ ಆಟಗಳ
ನಮ್ಮಂಥ ಒಂಟಿ ಜೀವಗಳ
ಚುಚ್ಚದಿರಿ ನೀವ್ ಜಗತ್ ಮಿಂಡ್ರಿಗಳ..

# ೪೨. ಮಾಟಗಾತಿ

ನೋಡ್ಕೊಂಡಿದ್ದಾನೆ ನಿನ್ನ ಹಿಂದೆ
ಊರಿನೆಲ್ಲಾ ಹುಡುಗರು
ಮಗುವಿನಂತ ಕಣ್ಣ ಕಂಡು
ತಮ್ಮ ತಾವೇ ಮರೆತರು

ಯಾವ ವಿದ್ಯೆ ಕಲಿತೆ ಹೇಳು
ಹುಡುಗರನ್ನು ಸೆಳೆಯಲು
ಬೆರಳುಗಳೇ ಸಾಲವು
ನಿನ್ನ ಮರುಳರನ್ನು ಎಣಿಸಲು

ಮಾಯಾ ಜಗದ ಮಾಟಗಾತಿ ಇಲ್ಲಿಗೇಕೆ ಬಂದೆ?
ಇಲ್ಲಿ ನಮ್ಮ ಹುಡುಗರ ಪ್ರೀತಿಯೇಕೆ ಕೊಂದೆ?॥

ನಿಂದು ನಿಜವಾದ ಪ್ರೀತಿ ಅಂತ
ಅಚ್ಚೆ ಹಾಕುಸ್‌ಕಂಡ ಆಗ್ಲೇ ಒಬ್ಬ
ನಿನ್ನೇ ಮದ್ವೆ ಆಗದಂತ ನನಗೆ
ಲಗ್ನಪತ್ರ ಕೊಟ್ಟ ಇನ್ನೂ ಒಬ್ಬ

ರಕ್ತದಲ್ಲಿ ಪತ್ರ ಬರ್ದು
ನಿನ್ನ ಕೈಗೆ ಕೊಟ್ಟ ಮತ್ತೆ ಒಬ್ಬ
ಬಂಗಾರದ ಬಂಗ್ಲೆ ಕಟ್ಸಿ
ನಿನ್ನೆಸರನಿಟ್ಟ ಮೂರ್ಖನೊಬ್ಬ

ಮಾಯಾ ಜಗದ ಮಾಟಗಾತಿ ಇಲ್ಲಿಗೇಕೆ ಬಂದೆ?
ಇಲ್ಲಿ ನಮ್ಮ ಹುಡುಗರ ಪ್ರೀತಿಯೇಕೆ ಕೊಂದೆ?॥

ನಾನೂ ನಿಂಗೆ ಐಲವ್ಯೂ ಅಂತ
ಹೇಳ್ಬೇಕಂದ್ಕಂಡ್ ಇದ್ದೆ
ಆಗ್ಲೆ ಹದ್ನಾರ್ ಹುಡುಗರವ್ರೆ
ಅದ್ಕೆ ಸುಮ್ಕೆ ಆದೆ

ಆ ಹದ್ನಾರ್‌ಜನ ಹುಡುಗರಲ್ಲಿ
ಒಟ್ಗೆ ಆರಾರ್ ಜನುನ್ ಹಿಂಡ್ತಾ ಇದಿಯ
ಆಗ್ಲೇ ಹತ್ತು ಹುಡುಗರನ್ನ
ದೇವದಾಸ್ರನ್ನಾಗಿ ಮಾಡಾಕಿದಿಯ

ಮಾಯಾ ಜಗದ ಮಾಟಗಾತಿ ಇಲ್ಲಿಗೇಕೆ ಬಂದೆ?
ಇಲ್ಲಿ ನಮ್ಮ ಹುಡುಗರ ಪ್ರೀತಿಯೇಕೆ ಕೊಂದೆ? ॥

ಈ ರಂಜನ್‌ನಂಗೆ ಇನ್ನೂ ಕೆಲುವ್ರು
ನಿನ್ನ ಅಂದಕ್ ಮೋಹಿತರಾಗೋಗವ್ರೆ
ನಿನ್‌ಅಸ್ಲಿ ವಿಸ್ಯ ಗೊತ್ತಿಲ್ದೆ
ನಿಂಗೆ ಕಾಳು ಹಾಕ್ತ ಅವ್ರೆ

ನಿನ್ ಜೊತೇಲಿರೊ ಆರು ಜನಕು
ಚೂರೂ ಶಂಕೆ ಹುಟ್ಟೇ ಇಲ್ಲ
ಗೊತ್ತಾಗಿದ್‌ಕ್ಷಣವೇ ಅವ್ರು
ಮನುಸರಾಗಿ ಇರೋದಿಲ್ಲ

ಮಾಯಾ ಜಗದ ಮಾಟಗಾತಿ ಇಲ್ಲಿಗೇಕೆ ಬಂದೆ?
ಇಲ್ಲಿ ನಮ್ಮ ಹುಡುಗರ ಪ್ರೀತಿಯೇಕೆ ಕೊಂದೆ? ॥

ಆ ನಿನ್‌ಕಣ್ಣಿ ಜಾದು ಕಣಮಿ
ಎಲ್ರನ್ನೂ ಸೆಳೆಯುತಿಹುದು
ನೋಟದಾಗೆ ಎಲ್ಲರನ್ನು
ನಿನ್ನ ಬಲೆಗೆ ಕೆಡವುತಿಹುದು

ಬಲೆಗಾಕ್ಕಂಡು ಎಲ್ರನ್ನೂ
ಎಲ್ಲಿಗ್‌ತಗಂಡ್‌ಹೋದಿಯ
ನಿನ್‌ತೀಟೆ ತೀರುದ್‌ಮೇಲೆ
ತೆಗ್ದು ಬಿಸಾಕ್ಬುಟು ಹೋಯ್ತಿಯ

ಮಾಯಾ ಜಗದ ಮಾಟಗಾತಿ ಇಲ್ಲಿಗೇಕೆ ಬಂದೆ?
ಇಲ್ಲಿ ನಮ್ಮ ಹುಡುಗರ ಪ್ರೀತಿಯೇಕೆ ಕೊಂದೆ? ॥

# ೪೩. ನಿನ್ನ ಕಣ್ಣು

ಮಿಂಚಿಗಿಂತ ಹೊಳಪು
ಅವಳ ಮುಖಗವುಸಿನ ಕಣ್ಣಿನಲ್ಲಿ
ಕಣ್ಣ ಮಿಂಚು ಬೆಳ್ಳಿ ಮಿಂಚು
ಪ್ರಳಯ ಎಬ್ಬಿಸಿದೆ ಎದೆಯಲ್ಲಿ

ಕೊಂಚ ಸರಿಸು ಗವುಸ
ನಾ ನೋಡುವೆ ನಿನ್ನ ಮುಖವ
ಅಡಗಿಸಿರುವೆಯಾ ಹೇಳು
ಕಣ್ಣಿನಂಚಿನಲ್ಲೇ ಲೋಕದೆಲ್ಲ ಸುಖವ

ವಾವಾ! ಏನು ಕಾಂತಿ ನಿನ್ನ
ಕಪ್ಪು ಕಣ್ಗಳಿಂದ
ಮಾಯೆಯ ಬಲೆಗೆ ಬಿದ್ದೆ
ನಿನ್ನ ಒಂದು ನೋಟದಿಂದ

ಹಾಗೆ ನೋಡಬೇಡ ಚಿನ್ನ
ಹಾಗೆ ನೋಡಬೇಡ ನನ್ನ
ಆಗಲೇ ನಾ ಬಿದ್ದಿರುವೆ
ಮೇಲೆ ಏಳಲಾರೆ ಇನ್ನ

ಈ ತಂಪು ಚಳಿಗೆ
ನಿನ್ನ ನೋಟದ ಬಿಸಿ ಕಾವು
ಕರಗಿಸಿದೆ ಹಿಮವನ್ನು,
ಕೆರಳಿಸಿದೆ ಮನವನ್ನು,

ನೋಟದ ಎಳೆ ಬಿಸಿಯೇ ಸಾಕು
ಸುಡುವ ಸೂರ್ಯ ಯಾಕೆ ಇನ್ನು
ಚಿಂತೆಯಿಲ್ಲ ಸೂರ್ಯ
ನಿನಗೆ ಬಂದರೂನು ಸಾವು

ಜಿಂಕೆಯಂತ ಕಣ್ಣಿನವಳೆ
ಸೇಬಿನಂತ ಕೆನ್ನೆಯವಳೆ
ಹುಡುಗಿಯರ ಕಣ್ಣೆತ್ತಿ ನೋಡದಂತ ರಂಜನ್‌ನನ್ನು
ನಿನ್ನನ್ನೆ ದಿಟ್ಟಿಸಿ ನೋಡುವಂತೆ ಮಾಡಿದವಳೆ

ಮಾತನ್ನೆ ಆಡದೆ, ಮುಖವನ್ನೂ ತೋರದೆ
ಬರೀ ನಿನ್ನ ಕಣ್ಣಿನಿಂದ ಪ್ರೀತಿ ಹುಟ್ಟಾಕಿದವಳೆ
ಹುಚ್ಚನಾಗೋದೆ ನಾನು ಇಲಾಜಿಲ್ಲ ಪ್ರೀತಿಗೆ
ಏನೇನೋ ಊಹಿಸುತಿರುವೆ ಮುಲಾಜಿಲ್ಲ ಮನಸಿಗೆ

ನಿನ್ನ ಕಣ್ಣ ಬೆಸುಗೆ ಸಾಕು
ಜನನ ಕೋಟಿ ಕನಸಿಗೆ
ಕನಸಿನಲ್ಲಾದರೂ ನಿನ್ನ ಗವುಸ ಸರಿಸು ಚಿನ್ನಾ
ಮೂರೇ ಮೂರು ಗೇಣು ಆ
ಸವಿ ಸುಂದರ ಸ್ವರ್ಗಕೆ
ಸುರ ಸುಂದರ ಸ್ವರ್ಗಕೆ

ಆಹಾ! ಎಂಥ ಭಾವ
ನಿನ್ನ ನೋಡುತ್ತ ಕುಳಿತರೆ
ಇನ್ನೇನು ಗತಿ ನೀನು
ಗವುಸ ತೆಗೆದು ನಕ್ಕರೆ

ಸತ್ತೇ ಹೋಗುವೆನೇನೊ
ಆನಂದದ ಅಮಲಿನಲ್ಲಿ
ಕೊಚ್ಚಿ ಹೋಗುವೆನೇನೊ
ನಿನ್ನ ಕಣ್ಣ ಕಡಲಿನಲ್ಲಿ

ಹಾಗೆ ನೋಡಬೇಡ ಚಿನ್ನ ಹಾಗೆ ನೋಡಬೇಡ ನನ್ನ
ನಿನ್ನ ಆ ನೋಟ ಕೆಡಿಸುತಿದೆ ತಲೆಯನ್ನ
ತಲೆಕೆಟ್ಟು ಎದ್ದು ನಿನಗೆ ಮುತ್ತನಿಡುವೆನು ನಾ
ತಲೆಕೆಟ್ಟು ಎದ್ದು ನಿನ್ನ ಮುದ್ದಾಡುವೆನು ನಾ...

# ೪೪. ಅಂತರಾಳದಾಳದಾಳದಲಿ

ಏನೂ ತೋಚದೆ ಇದ್ದರೂ ನಾನು
ಗೀಚುವೆ ಲೇಖನಿ ಏತಕೊ ಕಾಣೆ
ಸುಳಿವೇ ನೀಡದೆ ಸಂಜೆಯ ಹೊತ್ತಿಗೆ
ಉದುರಿದೆ ಮೆಲ್ಲನೆ ಮಳೆಸೋನೆ

ರಂಜನ್ ಕಣ್ಣಿಗೆ ಬಿಸಿಲಲಿ ಒಣಗಿದ
ಬಿಳಿ ಸುಣ್ಣದ ಗೋಡೆಯೂ ಬಲುಚಂದ
ಆದರೆ ಚಿನ್ನದ ಅರಮನೆ ನೋಡಲು
ಏತಕೊ ಬಿಂಬವು ಬಲುಮಂದ

ಮಂದಹಾಸ ಬೀರುತ್ತ ಹುಡುಗಿ ಯಾರೊ
ಕದ್ದು–ಮುಚ್ಚಿ ನೋಡುವಳು ನನ್ನನ್ನೇ
ತುಟಿಗಳು ಕದಲದೆ, ಸಿಹಿಧ್ವನಿ ಕೇಳಿದೆ
ಆಹಾ! ಆಹಾ! ಮಾತನಾಡಿದೆ, ಮೋಹಕ ಚೆಂದುಳ್ಳಿ ತಿಳಿಗಣ್ಣೆ

ಕಳೆದೋದೆನು ನಾನು, ಕನಸೊಳಗಿರುವೆನು
ಅಪ್ಪಿ–ತಪ್ಪಿ ನಾ ಜಾರಿ ಬಿದ್ದರೆ, ಕೇಳಿಕೊ ಹೆಣ್ಣೆ ನೀನೇ ಹೊಣೆ
ಅವಳೇನೋ ಸುಮ್ಮನೆ ನಕ್ಕಳು ಅಷ್ಟೆ
ಹಿಡಿತಕೆ ಸಿಗದ ಹುಚ್ಚು ಮನಸಿದು, ಆಗಲೆ ಏರಿದೆ ಹಸೇಮಣೆ

ಕಾಗೆಯು ರಾಗವು ಇಂಪೆಂದೆನಿಸಿದೆ
ಸಾವಿನ ಮನೆಯೂ ಹಿತವೆಂದೆನಿಸಿದೆ
ಎದೆಬಡಿತವ ಹಾಗೇ ಸುಮ್ಮನೆ ಎಣಿಸಿದೆ
ಎಲ್ಲೆಯ ಮೀರಿ ಸದ್ದನು ಮಾಡಿದೆ

ವಿನೋದದ ಒಡಲಿನೊಳಗಡೆ
ವಿಷಾದವು ಅಡಗಿ ಕುಳಿತಿದೆ
ಕಡೆಗಣಿಸುವ ಕಣ್ಗಳ ಕೆಳಗಡೆ
ವಿವೇಕದ ತೊರೆಯೆ ಹರಿದಿದೆ

ಅಂತರಾಳದಾಳದಾಳದಲಿ
ಬಗೆಹರಿಯದ ಕನ್ನಡ ಒಗಟಿವೆ
ಬಗೆಹರಿಸಲು ಕುಳಿತರೆ ಬದುಕಲಿ
ಬಿರುಗಾಳಿಯ ಎಬ್ಬಿಸೊ ಅಲೆಯಿವೆ

ಅಲ್ಲಾಡದ ಬಂಡೆಯ ಕಲ್ಗಳು
ಅಲೆದಾಡಿ ವಿಶ್ರಾಂತಿಗೆ ಕುಳಿತಿವೆ
ಬಂಡೆ ಭಾರದ ಬುಂಡೆಯ ನರಗಳು
ಹೊಂಚುಗಳಾ ಮಿಂಚನು ಹರಿಸಿವೆ

ಅಂತರಾಳದಾಳದಾಳದಲಿ
ರನ್ನ, ರತ್ನಗಳ ಗಣಿಗಳು ತೆರೆದಿವೆ
ಕೊಂಚಕೊಂಚವೇ ಇಳಿದರೆ ಆಳಕೆ
ಮೇಲೇಳದ ಮೋಡಿಯ ಮಾಡಿವೆ

ಅಂತರಾಳದಾಳದಾಳದಲಿ
ಊಹೆಗು ಮೀರಿದ ವ್ಯೂಹವ ಕಾಣುವೆ
ನೂರು ಗಳಿಕೆ ಸಾವಿರ ಬಯಕೆ
ನೆಮ್ಮದಿ ಒಡಲನು ಉಗುರಲಿ ಪರಚಿವೆ..

# ೪೫. ನಿಜ

ನಿಜ, ಅವಳು ಚಂದ್ರನ ಮಗಳು
ಬೆಳ್ಳಿಯಂತೆ ಥಳಥಳಿಸುವಳು
ಹುಣ್ಣಿಮೆಯಂತೆ ಬಂದಳು ಅವಳು
ಬದುಕನ್ನೇ ಅಮವಾಸೆ ಮಾಡೋದಳು

ನಿಜ, ಅವಳ ಕಣ್ ಎಳೇ ಕಾಡ್ಗಿಚ್ಚು
ಮನಸ್ಸಿನೊಳಗೆ ಲಗ್ಗೆ ಇಟ್ಟಳು
ಲಗ್ಗೆಯಿಟ್ಟು ವೈಭವದಿಂದ ಮನಸ್ಸನ್ನು ಹಬ್ಬಿದಳವಳು
ಹಬ್ಬಿ–ಹಬ್ಬಿ ಅಗ್ನಿಯಲ್ಲಿ, ಪ್ರೇಮವ ಸುಟ್ಟು ಭಸ್ಮ ಮಾಡಿದಳು

ನಿಜ, ಅವಳ ನಗು ಜೇನಿಗಿಂತ ಸಿಹಿ
ಸಿಹಿಕೋಲಾಹಲ ನಗುತಿದ್ದರೆ ಅವಳು
ದಿನೇ–ದಿನೇ ಕೊಂಚಕೊಂಚವೇ, ಕೋಲಾಹಲವ ಕುಡಿಸಿದಳವಳು
ಅಮಲು ತಲೆಗೆ ಏರಿ, ರಕ್ತವನ್ನು ಕಾರುವ ಸ್ಥಿತಿ ತಂದಿಟ್ಟಳು

ನಿಜ, ಎದೆತುಂಬಿ ತುಂತುಂಬಿ ನನ್ನ ಪ್ರೀತಿಸಿದಳವಳು
ಪ್ರೀತಿಯ ರಸವಾಗಿ ರಂಜನ್ ಎದೆಯಲ್ಲಿ ತುಂಬಿಹೋದಳು
ಎಷ್ಟು ಹತ್ತಿರ ಬಂದು, ಅದೆಷ್ಟು ಪ್ರೀತಿಯ ಮಾಡಿದಳೆಂದರೆ
ಈ ನನ್ನ ಹೃದಯವೇ ಹೊಡೆದೋಗುವಷ್ಟು ಪ್ರೀತಿ ಮಾಡಿದಳು

ನಿಜ, ಅಪ್ಪಟ ಕನ್ನಡತಿ ಅವಳು
ಸದಾ ಸಿರಿಕನ್ನಡವ ನುಡಿಯುವಳು
ಕನ್ನಡದಲ್ಲೇ ಪ್ರೀತಿ ಮಾಡುತ್ತ
ಇಂಗ್ಲೀಷ್ ನಲ್ಲಿ "ಐ ಹೇಟ್ ಯು" ಅಂದಳು

ನಿಜ, ಅವಳು ರತ್ನದ ಹರಳು
ಮುತ್ತು-ರತ್ನಕೂ ಮಿಗಿಲಾದವಳು
ಮುಗಿಲಿನ ಅಮೃತದಿಂದ ಒಂದು ಭಾರಿ ಮಿಂದಳು ಅವಳು
ರತ್ನದ ರಂಗೋಗಿ ಕಾಗೆ ಬಂಗಾರದಂತೆ ಕರಗಿ ಹೋದಳು

ನಿಜ, ಅವಳೇಳಿದ ಕಥೆ-ಕವಿತೆಗಳು
ನಾವಿಬ್ಬರು ಕಂಡ ಕನಸುಗಳು
ಕನಸಿನಲ್ಲೂ ನಗುತ್ತಲೇ ಇದ್ದಳು
ನಗುತ್ತಾ ಸನಿಹಕೆ ಬಂದು, ಬೆನ್ನಿಗೆ ಚೂರಿ ಹಾಕಿದಳು

ನಿಜ, ಎದೆತುಂಬಿ ತುಂತುಂಬಿ ನನ್ನ ಪ್ರೀತಿಸಿದಳವಳು
ಪ್ರೀತಿಯ ರಸವಾಗಿ ರಂಜನ್ ಎದೆಯಲ್ಲಿ ತುಂಬಿಹೋದಳು
ಎಷ್ಟು ಹತ್ತಿರ ಬಂದು, ಅದೆಷ್ಟು ಪ್ರೀತಿಯ ಮಾಡಿದಳೆಂದರೆ
ಈ ನನ್ನ ಹೃದಯವೇ ಹೊಡೆದೋಗುವಷ್ಟು ಪ್ರೀತಿ ಮಾಡಿದಳು..

# ೪೬. ವೊತ್ತಲ್ದ ವೊತ್ತು

ವೊತ್ತಲ್ದ ವೊತ್ತಲ್ಲಿ ಮುತ್ನಂಥ ಹೆಣ್ಣೊಬ್ಳು
ನಿಂತವ್ಳೆ ಕೆಂಪ್ಸೀರೆ ಉಟ್ಕಂಡು ದುಃಖ್ದಲ್ಲಿ
ಕಾವೇರಿ ವೊಳೆ ಅಂಚು, ಕಾಡೊಳ್ಗೆ ಕಾಡ್ಗಿಚ್ಚು
ತಿಂಗಳಾ ಚಂದೀರ ಚೆಲ್ತವ್ನೆ ಬಿಳಿ ಸಿಂಚು

ಬೆಳ್ಳ್-ಬೆಳ್ಳುಗ್ ಬೆಂಕೀಗೆ ಸೀರೆ ಉಟ್ಸ್‌ದಂಗವ್ಳೆ
ಕಣ್ತುಂಬಾ ಕಣ್ಣೀರ ತುಂಬ್ಕಂಡವ್ಳೆ
ತೊಟ್ಲಾಗಿರೊ ಕೂಸಂಗೆ ಮುದ್-ಮುದ್ದಾಗ್ ಕಾಣ್ತವ್ಳೆ
ದಿಕ್ಕೆಟ್ಟಿರೊ ದ್ಯೆದಂಗೆ ಅಳ್ತಾಅವ್ಳೆ

ಈ ಹುಣ್ಮೆ ದಿಸ್ದಲ್ಲಿ ಮುಸ್ಸಂದೆ ವೊತ್ತಲ್ಲಿ
ಈ ಕಾಡಿಗ್ ಬಂದಿತ್ತು ಆ ವೆಣ್ಣು ಖುಸಿಯಲ್ಲಿ
ಬೆಟ್ಟುದ್ನೆಲ್ಲಿ ಕಾಯ್ನ ಅವ್ಳ್ ತಿನ್ಬೇಕನ್ನೊ ಆಸೇಲಿ,
ತಂದಿದ್ಲು ಒಂದ್ ಚಿಕ್ಕು ಬುಟ್ಟೀನ ಕೈಯಲ್ಲಿ

ಇದ್ದ ಒಬ್ ಬಡ್ವೈದ ಕಾಡೊಳ್ಗೆ ಗುಡ್ಸ್ಲಾಗೆ
ನೋಡ್ತಿದ್ದ ಈವೆಣ್ಣ ಕಚ್ಕಂಡು ತಿನ್ನಂಗೆ
ಈವೆಣ್ಣು ಆವೈದ್ನ ನೋಡ್ತ್ ವಾರೆ ಕಣ್ಣಾಗೆ
ಗೊತ್ತಿಲ್ಲ ಏನಿತ್ತೊ ಈವೆಣ್ಣಿನ್ ಮನ್ಸ್ನಾಗೆ

ಒಂದ್ಸಾರಿ ಈವೆಣ್ಣು ಕಾಲಾಗಿರೊ ಜೋಡ್ ನೋಡ್ತು
ಆವೈದ ಈವೆಣ್ಣ ಸೊಂಟಾನೇ ನೋಡ್ತಿತ್ತು
ಈವೆಣ್ಣು ಅವ್ನುನ್ನ ಗುರ್‌ಗುಟ್ಕಂಡ್ ನೋಡ್ತೈತೆ
ಕ್ಯಾಣ ವಸಿ ಹೆಚ್ಚಾಗಿ ಕಣ್ ಕೆಂಪುಗ್ ಆಗೈತೆ

ಆವ್ವೈದ ಮೆತ್-ಮೆತ್ಗೆ ಇವ್ಳತ್ರ ಬರ್ತವ್ನೆ
ಈವೆಣ್ಣು ದಿಗ್ಲಲ್ಲಿ ಹಿಂದ್-ಹಿಂದುಕ್ ವ್ಹೋಯ್ತವ್ಳೆ
ಅಲ್ಲಿಂದ್ಲೇ ಆವ್ವೈದ ಯಾವ್ರೂರಮಿ ನಿಂದಂದ್ರೆ
"ನಮ್ಮೂರ್ನ ಕಟ್ಕಂಡು ನಿಂಗ್ಯಾಕೆ ಬುಡು" ಅಂದ್ಲು

ಕಾಲಾಗಿರೊ ಜೋಡ್ನ ಬಿಚ್ ಕೈಯಾಗ್ ಹಿಡ್ಕಂಡ್ಲು
"ಹತ್ರ ಪತ್ರ ಬರ್ಬ್ಯಾಡ ಅಲ್ಲೆ ನಿಂತ್ಕೊ" ಅಂತಂದ್ಲು
"ಯಾಕಮ್ಮಿ-ಯಾಕಮ್ಮಿ ಅಂತವ್ನ್ ಅಲ್ಲ" ಅಂತಂದ
"ಏಂತವ್ನಾದ್ರೆ ನಂಗೇನು? ದೂರ್ದಾಗೆ ನಿಂತ್ಕಂಡು ಮಾತಾಡು" ಅಂತಿದ್ಲು

ಮಾತಾಡಕ್ ಇನ್ನೇನು, ಪಂಚೆ ಏತ್ ಕಟ್ಟೋನು,
ಓಡ್ ಬಂದು ಕೈ ಹಿಡ್ದ, ಯಾವಾಗಿಂದ್ ಕಾಯ್ತಿದ್ನೊ,
ಕೊಸ್ರಾಡಿ, ಕಿರ್ಚಾಡಿ, ಗೋಳಾಡ್ತು ಈವೆಣ್ಣು
ಮರ್ಮಾಂಗುಕ್ ಜಾಡ್ಸ್ ಒದ್ರೆ, ಏಳ್ಲಿಲ್ಲ ಬಿದ್ದೋನು

ಹುಣ್ಸೆಕಾಯ್ ಬುಟ್ಟೇನ ಬಲ್ಗೈಯಾಗ್ ಏತ್ಕಂಡ್ಲು
ಬುಂಡೇಗೆ ವ್ಹೊಡ್ದ್-ವ್ಹೊಡ್ದು ರಕ್ತಾನ ಚೆಲ್ಲುದ್ಲು
ಕಾಲಾಗೆ ವ್ಹೊದ್-ವ್ಹೊದ್ದು ಬೀಜಾ ವ್ಹೊಡ್ದಾಕುದ್ಲು
ಕಾಡ್ ಪ್ರಾಣಿ ಕೊಂದಂಗೇ ಅವ್ನುನ್ನ ಕೊಂದ್ಬುಟ್ಲು

ಅವ್ನ್ ಸತ್ತಿರೊ ಪರಿ ನೋಡಿ, ಈವೆಣ್ಣೇ ಬೆಚ್ಬಿದ್ಲು
ತಲೆಕೆಟ್ಟು ಅಲ್ಲಿಂದ ತಿರ್ಗ್ ನೋಡ್ದೆ ಓಡೋದ್ಲು
ಓಡೋಡ್ತ ಅತ್ಲಿಂದ ಕರಿಚೆರ್ತೆ ಬರ್ತೈತೆ
ಈವೆಣ್ಣು ದಂಗಾಗಿ ವಾಪಾಸ್ ಓಡ್ ಬತ್ತೈತೆ

ಬಂದೋಳೆ ಆ ವೈದುನ್ ಗುಡುಸ್ಲುವಾಳಿಕ್ ವ್ಹೊಕ್ಕಂಡ್ಲು
ಕಡ್ಡೀಯ ಗೀರಿ ಬೆಂಕೀಯ ಹತ್ಸುದ್ಲು
ದೀಪಾದ ಬೆಳ್ಕಾಗೆ ಸುತ್-ಮುತ್ಲೂ ನೋಡುದ್ಲು
ಹಾವಾಡ್ಸವ್ನ್ ಅವ್ನು, ಹಾವಿದ್ದೊ ಕುಕ್ಕೆ ತುಂಬ್ಲೂ

ಕಟ್ಟಾವು, ಕೆರೆಹಾವು, ಹಸ್ರಾವು, ಹೆಬ್ಬಾವು
ನೋಡ್–ನೋಡ್ತ ಈವೆಣ್ಣು ಮೈಯೆಲ್ಲಾ ಬೆವ್ರೋದ್ಲು
ಗಾಬ್ರೀಲಿ ದೀಪುಕ್ಕೆ ಬಲ್ಗೈಯ್ಯ ತಗ್ಲುಸುದ್ಲು
ಬೆಂಕೀನ ಹಾರುಸ್ದೆ ಆಚೆಕ್ ಕಡ್ದ್ ವೊಂಟೋದ್ಲು

ಅತ್ಲಿಂದ ಯಾವ್ದೋ ಹೆಣ್ ಕೂಗೋ ಸದ್ ಕೇಳುಸ್ತು
ದನಿ ಕೇಳಿ ಈವೆಣ್ಣು ಮೆಲ್–ಮೆಲ್ಲುಗ್ ಬಳಿಗೋಯ್ತು
ಅಯ್ಯಯ್ಯೊ ಹೆಣುದ್ ಹೆಂಡ್ರು ಎದೆ ಚಚ್ಕಂಡ್ ಅಳ್ತಿದ್ಲು
ಮರೇಲ್ ಇದ್ ಇವ್ಳ್ ಕಡಿಕೆ, ಒಂದ್ ಕಿತ ನೋಡುದ್ಲು

ದೈಯ್ಯಾ ನೋಡ್ದೋಳಂಗ್ ಇವ್ಳ್, ಓಡೋಕ್ ಶುರುಮಾಡುದ್ಲು
ಬೆಂಕಿ ಶ್ಯಾನೆ ದೊಡ್ಡಾಗಿ, ಉರೀತಿತ್ ಅವ್ರ್ ಗುಡುಸ್ಲು
"ಕೆಡ್ಸೋದುಕ್ ಬಂದಿದ್ನೊ? ಕಾಪಾಡಕ್ ಬಂದಿದ್ನೊ?
ದುಡ್ಕಿ ಅವ್ನ ಕೊಂದ್ಬುಟ್ನೋ? ಇಲ್ಲಾ, ನಾನ್ ಮಾಡಿದ್ದೇ ಸರೀನೋ?"

ಏನಾಯ್ತು ತಿಳಿಯೊಳ್ಳು, ತಿರ್ಗಾ ಸಹ ನೋಡೋಳ್ಲು,
ಅವ್ನ್ ಹೆಂಡ್ರು ಗತಿ ನೆನ್ಸ್‌ಕಂಡು ಹುಚ್ಚೆದ್ದು ಅಳ್ತಿದ್ಲು,
ತಲೆ ಕೆಟ್ಟಂಗ್ ಓಡ್ತಿದ್ಲು, ಕಾಡೊಳ್ಗೆ ಕಳ್ದೋದ್ಲು,
ಓಡೋಡಿ–ಓಡೋಡಿ ವೊಳೆ ಅಂಚಿಗ್ ಬಂದ್ಬುಟ್ಲು

ವೊತ್ತಲ್ದ ವೊತ್ತಲ್ಲಿ ಮುತ್ನಂಥ ಹೆಣ್ಣೊಬ್ಳು
ನಿಂತವ್ಳೆ ಕೆಂಪ್ಸೀರೆ ಉಟ್ಕಂಡು ದುಃಖ್ದಲ್ಲಿ
ಕಾವೇರಿ ವೊಳೆ ಅಂಚು, ಕಾಡೊಳ್ಗೆ ಕಾಡ್ಗಿಚ್ಚು
ತಿಂಗಳಾ ಚಂದೀರ ಚೆಲ್ತವ್ನೆ ಬಿಳಿ ಸಿಂಚು

ಬೆಳ್–ಬೆಳ್ಗುಗ್ ಬೆಂಕೀಗೆ ಸೀರೆ ಉಟ್ಸ್‌ದಂಗವ್ಳೆ
ಕಣ್ತುಂಬಾ ಕಣ್ಣೀರ ತುಂಬ್ಕಂಡವ್ಳೆ
ತೊಟ್ಲಾಗಿರೊ ಕೂಸಂಗೆ ಮುದ್–ಮುದ್ದಾಗ್ ಕಾಣ್ತವ್ಳೆ
ದಿಕ್ಕೆಟ್ಟಿರೊ ದೈದಂಗೆ ಅಳ್ತಾಅವ್ಳೆ...

# ೪೭. ಮಹಾನಟಿ

ಪ್ರೀತಿಯ ಕೊಳದ ಬಳಿಯು ಸುಳಿಯದವ
ಇಳಿದೆ ಒಳಗೆ, ನಿನ್ನಯ ಜೊತೆಗೆ
ಆಳ ಅಳೆಯದೆ, ಅಗಲ ಲೆಕ್ಕಿಸದೆ
ಜಿಗಿದೆ ಕೆಳಗೆ, ಸಿಕ್ಕಿದೆ ಸುಳಿಗೆ

ಸಮುದ್ರದಲೀಜುವ ಸಾಗರಕನ್ಯೆ ನೀ
ಈಜು ಬರದ ಬಡಪಾಯಿ ಕರುವು ನಾ
ಜಗವನು ತಿರುಗುವ ರುಪಾಯಿ ನೋಟು ನೀ
ಹೊಸಲನು ದಾಟದ ಬೆಳ್ಳಿಯ ಲೋಟ ನಾ

ಕಟ್ಟಿದೆ ತುರುವನು ಬಿಗಿದು ಕುತ್ತಿಗೆಗೆ
ನೇತಾಕಿದೆ ತುದಿಯನು ಅಟ್ಟದ ತೊಲೆಗೆ
ಉಸಿರು ಕಟ್ಟಿ ನಾ ವಿಲವಿಲ ಎಂದರೂ
ತಿರುಗಿ ನೋಡದೆ ಹೋದೆ ನೀ ಹೊರಗೆ

ಆಹಾ! ಎಂಥಹ ಅಮರ ಪ್ರೇಮಿ ನೀ
ಸಾಯಿಸಿ ಪ್ರೇಮವ ತಿನ್ನುವೆ ಹೋಳಿಗೆ
ಆಹಾ! ಎಂಥಹ ಅಮರ ಪ್ರೇಮಿ ನೀ
ಸಾಯಿಸಿ ಪ್ರೇಮವ ತಿನ್ನುವೆ ಹೋಳಿಗೆ

ಪ್ರೀತಿಯ ಕೊಳದ ಬಳಿಯು ಸುಳಿಯದವ
ಇಳಿದೆ ಒಳಗೆ, ನಿನ್ನಯ ಜೊತೆಗೆ
ಆಳ ಅಳೆಯದೆ, ಅಗಲ ಲೆಕ್ಕಿಸದೆ
ಜಿಗಿದೆ ಕೆಳಗೆ, ಸಿಕ್ಕಿದೆ ಸುಳಿಗೆ

ಮೌನ, ಏಕಾಂತ, ನೆಮ್ಮದಿ ಜೀವನ
ಹೋರಿ ಕರುವಂತ ಒಂಟಿ ಹುಡುಗ ನಾ
ಕೆಡವಿದೆ ಹಳ್ಳಕೆ ತಿನಿಸಿದೆ ಪ್ರೀತೀನ
ಪ್ರೀತಿ ಎನ್ನುವ ಕೊಳೆತ ಹುಲ್ಲನ್ನ

ನಿನ್ನ ಮೋಹದ, ಮೋಸದ ಹುಲ್ಲನು
ಮೇಯುತಿದ್ದ ಹತ್ತನೆ ಕರುವು ನಾ
ಮೊದಲ ಭಾರಿಗೆ ಏತಕೋ ನನಗೆ
ಮೌನದಲ್ಲೂ ಆಗಿದೆ ತಲ್ಲಣ

ಈ ಮನುಷ್ಯರು ಊಹೆಗೂ ಹೊರಗೆ
ಗೋಸುಂಬೆಯ ಚರ್ಮದ ಹಾಗೆ
ಯಾವ ಸಮಯಕೆ ಯಾವ ಬಣ್ಣವೊ
ರಂಜನ್ ಬುದ್ಧಿಗೆ ತಿಳಿವುದು ಹೇಗೆ

ಪ್ರೀತಿ ಎನ್ನುವುದೆ ಭ್ರಮೆ ಎಂದೆನಿಸಿದೆ
ಮತ್ತೆ ಜನರನ್ನು ನಂಬಲಿ ಹೇಗೆ
ನಂಬಿಕೆ ಪದದ ಅರ್ಥವ ಮರೆಸಿದೆ
ಈ ಚಳಿಯಲ್ಲೂ ಬೆವರುವ ಹಾಗೆ

ಮಕರಂದವ ಹೀರುವ ಚಿಟ್ಟೆಗೆ
ಕೋಲಾಹಲವ ಕುಡಿಸಿದರೇಗೆ?
ಬಹಳಾ ಚೆನ್ನಾಗಿ ನಟಿಸುವೆ
ಮಹಾನಟಿ ಪ್ರಶಸ್ತಿಯು ನಿನಗೇ

ಪ್ರೀತಿಯ ಕೊಳದ ಬಳಿಯು ಸುಳಿಯದವ
ಇಳಿದೆ ಒಳಗೆ, ನಿನ್ನಯ ಜೊತೆಗೆ
ಆಳ ಅಳೆಯದೆ, ಅಗಲ ಲೆಕ್ಕಿಸದೆ
ಜಿಗಿದೆ ಕೆಳಗೆ, ಸಿಕ್ಕಿದೆ ಸುಳಿಗೆ..

# ೪೮. ಹೊತ್ತಾಗಿದೆ

ಎಲೆ ತಿರುಗಿದೆ ಚಂದ್ರನ ನೋಡಲು
ಚಂದ್ರ ಬಂದನು ನಿನ್ನನು ಹುಡುಕಲು
ನಾನೇಕೆ ಇಲ್ಲೆ ಕುಳಿತಿರುವೆ?
ಹೊತ್ತಾಗಿದೆ ವಸಿ ಹಾಳಾಗಲು

ಅಲೆ ಬಂದಿದೆ ತೀರವ ಸೇರಲು
ಮಳೆ ಸುರಿದಿದೆ ನಿನ್ನನು ನೆನೆಸಲು
ನಾನೇಕೆ ಇಲ್ಲೆ ಕುಳಿತಿರುವೆ?
ಹೊತ್ತಾಗಿದೆ ಮುತ್ತನು ಕದಿಯಲು

ಕತ್ತಲಲಿ ನೀ ದೀಪವ ಬೆಳಗಲು
ಬತ್ತಿ ಸವೆದು ಎಣ್ಣೆಯ ಹಾಕಲು
ನಾನೇಕೆ ಇಲ್ಲೆ ಕುಳಿತಿರುವೆ?
ಹೊತ್ತಾಗಿದೆ ಬೆಂಕಿಯ ಹಚ್ಚಲು

ಬಯಸಿದೆ ಸಂಗೀತವ ಕೇಳಲು
ನಿನ್ನಂಥಹ ತಬಲವೆ ಸಿಕ್ಕಲು
ನಾನೇಕೆ ಇಲ್ಲೆ ಕುಳಿತಿರುವೆ?
ಹೊತ್ತಾಗಿದೆ ವಾದ್ಯವ ನುಡಿಸಲು

ನಾ ನಿನ್ನ ಹೆಸರನು ಕೇಳಲು,
"ರಂಜನ್–ನ–ಪ್ರಿಯತಮೆ" ಎನ್ನಲು
ನಾನೇಕೆ ಇಲ್ಲೆ ಕುಳಿತಿರುವೆ?
ಹೊತ್ತಾಗಿದೆ ಕನ್ನಡಿ ನೋಡಲು

ಜಡೆ ಹೆಣೆದು ಹೂವನು ಮುಡಿಸಲು
ನೀ ನಾಚುತ ತುಟಿಯನು ಕಡಿಯಲು
ನಾನೇಕೆ ಇಲ್ಲೆ ಕುಳಿತಿರುವೆ?
ಹೊತ್ತಾಗಿದೆ ಪಟಾಕಿ ಹೊಡೆಯಲು

ಹೊಲೆ ಹಚ್ಚಿ ಅಡುಗೆಯ ಮಾಡಲು
ನೀ ನಗುತ ಹೋಳಿಗೆ ಬಡಿಸಲು
ನಾನೇಕೆ ಇಲ್ಲೆ ಕುಳಿತಿರುವೆ?
ಹೊತ್ತಾಗಿದೆ ಊರಿಗೆ ಸಾರಲು

ನನ್ನ ನೋಡಿ ಚಂದ್ರನು ಉರಿಯಲು
ಹೊರಟು ಹೋದ ನೀರಲಿ ಮುಳುಗಲು
ನಾನೇಕೆ ಇಲ್ಲೆ ಕುಳಿತಿರುವೆ?
ಹೊತ್ತಾಗಿದೆ ಕನಸಿಂದೇಳಲು..

# ೪೯. ರಾಜಕುಮಾರಿ

ಶ್ರೀಗಂಧದ ಅರಮನೆಯಲ್ಲಿ
ಆಡುತ್ತಿದ್ದಳು ರಾಜಕುಮಾರಿ
ಅರಮನೆಗೆ ಕಡ್ಡಿಯ ಗೀರಿ
ಆಗಸದ ಚುಕ್ಕಿಯು ಜಾರಿ

ಜನರೆಲ್ಲ ಜಮಾಯಿಸಿದರು
ಉರಿವ ಅಗ್ನಿಗೆ ಎಂಜಲ ಸುರಿಯಲು
ಖಜಾನೆಯ ಕೊಳ್ಳೆಹೊಡೆದಳು
ಲಾಭವೇನು ದ್ವಾರ ಮುಚ್ಚಲು

ರಾಜಕುಮಾರಿಯ ಕೈ ಹಿಡಿದವನು
ಶೂರ ವೀರ ರಾಜಕುಮಾರನಲ್ಲ
ಸರ್ವಜ್ಞನಂತಹ ವಿಧ್ವಾಂಸನೂ ಅಲ್ಲ
ರಂಜನ್ ನಂತಹ ಕವಿರತ್ನನೂ ಅಲ್ಲ

ಮಾಸಕ್ಕೊಬ್ಬಳ ಸೆರಗನು ಮೂಸುತ
ಹೆಣ್ಣೆಂದರೆ ಜೊಲ್ಲು ಸುರಿಯುವ
ಬಸವನಂತೆ ಬೀದಿ ಸುತ್ತುವ
ಅವರಿವರ ಕಾಲನಿಡಿಯುವವ

ಶ್ರೀಗಂಧದ ಅರಮನೆಯಲ್ಲಿ
ಆಡುತ್ತಿದ್ದಳು ರಾಜಕುಮಾರಿ
ಅರಮನೆಗೆ ಕಡ್ಡಿಯ ಗೀರಿ
ಆಗಸದ ಚುಕ್ಕಿಯು ಜಾರಿ

ಜಾರಿ ಬಿದ್ದಿದೆ ಚುಕ್ಕಿ ಬಾನಿಂದ
ಅರಮನೆಯಲಿ ಸಾವಿನ ನೆರಳು
ಇಪ್ಪತ್ತು ವರ್ಷದ ಮಗಳು
ನಿಲ್ಲದು ಮಹಾರಾಜನ ಅಳಲು

ನಂಭಿಕೆಯ ನಂದಾದೀಪವು
ನಂದಿದೆ ಅವಳೋದ ರಭಸಕ್ಕೆ
ನೊಂದಿದೆ ಅವಳೊಡೆದ ಹೊಡೆತಕ್ಕೆ
ನೆನಪಿನ ಮಳೆಗಾಲ ಹೃದಯಕ್ಕೆ

ಹೆತ್ತು ಹೊತ್ತು ಬದುಕನು ಕಲಿಸಿ
ಎದ್ದು ಬಿದ್ದು ಕೈಯ್ಯ ಹಿಡಿದು ನಡೆಸಿ
ದುಡಿದು ಬೆಂದು ಬೆವರನು ಹರಿಸಿ
ಹೋದಳಾಕೆ ಗೌರವಕೆ ಮಸಿ ಬೆರೆಸಿ

ನೆನ್ನೆ ಬಂದವನ ಮಾತಿಗೆ ಕರಗಿ
ಹೆತ್ತವರ ಎದೆಗೊದ್ದಳು ಹುಡುಗಿ
ಮತ್ತೆ ಆಕೆ ಬಂದರೆ ತಿರುಗಿ
ತಿಥಿ ಊಟ ಖಂಡಿತವಾಗಿ

ಶ್ರೀಗಂಧದ ಅರಮನೆಯಲ್ಲಿ
ಆಡುತ್ತಿದ್ದಳು ರಾಜಕುಮಾರಿ
ಅರಮನೆಗೆ ಕಡ್ಡಿಯ ಗೀರಿ
ಆಗಸದ ಚುಕ್ಕಿಯು ಜಾರಿ..

# ೫೦. ಪಯಣ

ಗುರಿಯಿಲ್ಲದ ಪಯಣವಿದು
ಹಾಕು ನೀ ಗುರುತುಗಳನು
ಮುಗಿದೋಗುವ ಮುಂಚೆ ನೀ
ಮಣಿಸು ಕೊಂಚ ಮನಸುಗಳನು

ತಿರುಗೋ ಜಗದಿ
ದಿನವೂ ತಿರುವೂ
ತಿರುಗೀ-ತಿರುಗೀ ದಣಿವೋ-ದಣಿವು
ದಣಿದರೇನೆ ಫಲವು
ಇಲ್ಲ, ಸಿಗದು ನಾಳೆ ಸುಖವು

ಈ ಪಯಣದ ಮಧ್ಯೆ
ಬರುವರು ಕೆಲ ಜನರು
ಎಲ್ಲರೂ ಸಜ್ಜನರು
ಎಂದು, ತಿಳಿಯದಿರು ನೀನೆಂದು
ನಿನಗೇ ತಿಳಿಯದಂತೆ ಇರುವರು ದುರ್ಜನರು

ಬಂದವರು ಯಾರೂ
ಕೊನೆತನಕ ಜೊತೆಗಿರರು
ಸಮಯ ಬಂದಾಗ
ಇಳಿದಿಳಿದು ಹೋಗುವರು

ಕಣ್ಣುಗಳ ಹಿಂದೆ
ಕಡಲೇ ಅಡಗಿದ್ದರೂ
ಜಗದ ಮುಂದೆ ನೀನೆಂದು
ಧುಮುಕಿಸದಿರು ಹನಿ ನೀರು

**ಪುಟ ೧೧೫**

ಗುರಿಯಿಲ್ಲದ ಪಯಣವಿದು
ಹಾಕು ನೀ ಗುರುತುಗಳನು
ಮುಗಿದೋಗುವ ಮುಂಚೆ ನೀ
ಮಣಿಸು ಕೊಂಚ ಮನಸುಗಳನು

ಸರಿದ ಸಮಯವನ್ನು
ಮತ್ತೆ ಹಿಂದೆ ತಳ್ಳಲಾರೆ
ಕಷ್ಟ ಬಂದ ದಿವಸ
ನಾಳೆಗೂ ಜಿಗಿಯಲಾರೆ

ಪಯಣ ವೇಗವಾಗಬಹುದು
ಪಯಣ ಲಾಗ ಹೊಡೆಯಬಹುದು
ಪಯಣ ಮುಂದೆ ಸಾಗಬಹುದು
ಪಯಣ ಇಂದೇ ಮುಗಿಯಬಹುದು

ಗೆಲುವನ್ನು ಆಚರಿಸು
ಸೋಲನ್ನು ಅನುಭವಿಸು
ಬೆನ್ನ ಹಿಂದೆ ಬೊಗುಳುವವರನ್ನೂ
ಪ್ರೀತಿಯಿಂದ ಸ್ವಾಗತಿಸು

ಗರಿಮೆ–ಹಿರಿಮೆ, ಜಾತಿ–ಧರ್ಮ
ರೂಪವಿರದ ಕೀಟದಂತೆ
ಕೊಂದು ಮುಂದೆ ಸಾಗು
ನೀ ರೋಗವನ್ನು ಹರಡದಂತೆ

ಗುರಿಯಿಲ್ಲದ ಪಯಣವಿದು
ಹಾಕು ನೀ ಗುರುತುಗಳನು
ಮುಗಿದೋಗುವ ಮುಂಚೆ ನೀ
ಮಣಿಸು ಕೊಂಚ ಮನಸುಗಳನು..